ಕೆ. ವೆಂಕಟಪ್ಪ

ಪ್ರೊ|| ಎಸ್. ಕೆ. ರಾಮಚಂದ್ರ ರಾವ್

ಕೆ. ವೆಂಕಟಪ್ಪನವರು

ವಿದ್ಯಾಲಂಕಾರ
ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಸಂಪಾದಕರು
ವಿ. ಎಂ. ಇನಾಂದಾರ್

ಐ ಬಿ ಎಚ್ ಪ್ರಕಾಶನ
ಗಾಂಧಿನಗರ
ಬೆಂಗಳೂರು-560009

ಬೆಲೆ :
1-50

*

ಸರ್ವಸ್ವಾಮ್ಯ :
ಪ್ರಕಾಶಕರವು

*

ಚಿತ್ರಗಳು :
ಮನಮೋಹನ್

*

ಮೊದಲನೆಯ ಮುದ್ರಣ :
ಜುಲೈ, ೧೯೭೩

*

ಅಧಿಕೃತ ಮಾರಾಟಗಾರರು :
ಇಂಡಿಯು ಬುಕ್ ಹೌಸ್
ಗಾಂಧಿನಗರ, ಬೆಂಗಳೂರು-೫೬೦೦೦೯

*

ಪ್ರಕಾಶಕರು :
ಶ್ರೀ ಪಿ. ಎನ್. ಕಾಮತ್
ಐ ಬಿ ಎಚ್ ಪ್ರಕಾಶನ, ಗಾಂಧಿನಗರ,
ಬೆಂಗಳೂರು-೫೬೦೦೦೯

*

ಮುದ್ರಕರು :
ಹೆಚ್. ಎಸ್. ಎನ್. ರಾವ್
ಐ ಬಿ ಎಚ್ ಪ್ರಕಾಶನ ಪ್ರಿಂಟರಿ
ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು-೫೬೦೦೫೪

ಮೊದಲ ದಿನಗಳು

ವೆಂಕಟಪ್ಪನವರು ಹುಟ್ಟಿದ್ದು ಮೈಸೂರಿನಲ್ಲಿ; ಹುಟ್ಟಿದ ದಿನ ೧೮೮೬ರ ಜುಲೈ ತಿಂಗಳು ೯ನೆಯ ತಾರೀಖು. ಅವರ ಹಿರಿಯರು ತಲೆಮಾರುಗಳಿಂದ ಮೈಸೂರು ಅರಮನೆಯ ಪರಿವಾರಕ್ಕೆ ಸೇರಿದ್ದವರು; ಅವರ ಅಜ್ಜ ಕೃಷ್ಣಪ್ಪನವರಂತೂ ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಆಪ್ತ ವರ್ಗಕ್ಕೆ ಸೇರಿದ್ದವರು. ಅವರ ಮನೆತನವೇ ಕಲಾವಿದರ ಮನೆತನ. ಬಣ್ಣದ ಚಿತ್ರ ಬಿಡಿಸುವುದು, ನಕಾಸಿ ಮೂಡಿಸುವುದು, ದಂತದಲ್ಲಿ ಗೊಂಬೆಗಳನ್ನು ಕಡೆಯುವುದು, ಜೇಡಿಮಣ್ಣಿನಲ್ಲಿ ಮೂರ್ತಿಗಳನ್ನು ಮಾಡುವುದು, ಚಿನ್ನ–ಬೆಳ್ಳಿ ಕುಸುರಿ ಕೆಲಸ ಹೀಗೆ ಹಲವಾರು ಕಲಾಪ್ರಕಾರಗಳಲ್ಲಿ ಅವರು ಹೆಸರು ಪಡೆದಿದ್ದವರು.

ವೆಂಕಟಪ್ಪನವರ ತಂದೆ ಚಾಮರಾಜ ಒಡೆಯರ ಕಾಲದಲ್ಲಿ ಕಲಾವಿದರಾಗಿದ್ದವರು. ಅರಮನೆಯ ಸಿಂಗಾರಕ್ಕೆ ಅವರ ನೆರವು ಎಲ್ಲರ ಮೆಚ್ಚಿಗೆಯನ್ನೂ ಗಳಿಸಿದ್ದಿತು; ಮಹಾರಾಜರೂ ಅವರಿಗೆ ಅನುಕೂಲವಾದ ಬದುಕನ್ನು

ಒದಗಿಸಿಕೊಟ್ಟಿದ್ದರು. ಅರಮನೆಯಲ್ಲಿ ತಿಂಗಳ ಸಂಬಳ ಹೆಚ್ಚಿಲ್ಲದಿದ್ದರೂ ಊಟಕ್ಕೆ, ಉಡುಗೆಗೆ, ಉದ್ಯೋಗಕ್ಕೆ ಎಲ್ಲ ಅನುಕೂಲಗಳನ್ನೂ ಒದಗಿಸುತ್ತಿದ್ದರು ; ವಿಶೇಷ ಸಂದರ್ಭಗಳಲ್ಲಿ ಬೆಲೆಬಾಳುವ ಉಡುಗೊರೆಗಳೂ ದೊರೆಯುತ್ತಿದ್ದುವು. ರಾಜರ ಒಲುಮೆಯಾದರಂತೂ ಸರಿಯೇ ಸರಿ ! ಹೀಗಾಗಿ ವೆಂಕಟಪ್ಪನವರು ಎಳೆತನದಲ್ಲಿ ಸಮೃದ್ಧವಾದ ಬದುಕನ್ನು ಕಂಡರು.

ಹುಡಗನಾಗಿದ್ದಾಗಲೇ ಅರಮನೆಯಲ್ಲಿ ಓಡಿಯಾಟ. ಮೈಸೂರು ಅರಮನೆಯನ್ನು ನೀವು ನೋಡಿದ್ದೀರಾ ? ಕಟ್ಟಡವೇ ಸುಂದರ ; ಅದರಲ್ಲಿ ಸೇರಿರುವ ಕಲಾಕೃತಿಗಳಂತೂ ಅದ್ಭುತ. ಹೀಗೆ ಕಲೆಗೆ ಬೀಡಾಗಿರುವ ಅರಮನೆ ನಮ್ಮ ನಾಡಿನಲ್ಲಿಯೇ ಇನ್ನೊಂದಿರದೆಂದರೆ ಹೆಚ್ಚಲ್ಲ. ಇಂಥ ಪರಿಸರದಲ್ಲಿ ಓಡಿಯಾಡಿದ ಹುಡುಗನಿಗೆ ಬುದ್ಧಿಯೂ ಚುರುಕಾಗಿದ್ದು ಕಲಾಭಿರುಚಿಯೂ ಇದ್ದರೆ ಮುಂದಿನ ಬೆಳವಣಿಗೆಗೆ ಅಣಿಮಾಡಿದಂತಲ್ಲವೆ ? ವಾತಾವರಣ ಅದಕ್ಕೆ ಅನುಕೂಲವಾಗಿದ್ದುದು ಮಾತ್ರವಲ್ಲ, ಆಳರಸರ ಕಲಾಭಿರುಚಿಯೂ ಇದಕ್ಕೆ ನೆರವಾಯಿತು. ಮೈಸೂರಿನ ಮಹಾರಾಜರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮೂವರೂ ಸ್ವತಃ ಕಲಾವಿದರು, ರಸಿಕರು, ಕಲಾಪ್ರೇಮಿಗಳು. ಎಲ್ಲೆಲ್ಲಿಂದಲೋ ಚಿತ್ರಗಾರರನ್ನು, ಶಿಲ್ಪಿಗಳನ್ನು, ಸಂಗೀತಗಾರರನ್ನು ಮೈಸೂರಿಗೆ

ಕರೆಯಿಸಿಕೊಂಡು, ತಮ್ಮ ಆಸ್ಥಾನದಲ್ಲಿ ಅವರನ್ನು ಪುರಸ್ಕರಿಸಿ ಇರಿಸಿಕೊಳ್ಳುತ್ತಿದ್ದರು. ಇವರೆಲ್ಲರ ಸಂಪರ್ಕದಿಂದ ಮೈಸೂರು ಜನವೇ ರಸಿಕ ಜನ ಎಂದು ಹೆಸರಾಯಿತು.

ವೆಂಕಟಪ್ಪನವರ ಹಿರಿಯರು ಕಲಾವಿದರಾಗಿದ್ದುದರಿಂದ, ಅದೇ ಅವರ ಜೀವಿಕೆಯಾಗಿದ್ದುದರಿಂದ ವೆಂಕಟಪ್ಪನವರೂ ಎಳೆತನದಲ್ಲಿಯೇ ಕಲೆಯನ್ನು ಹಿಡಿದುದು ಆಶ್ಚರ್ಯವೇನಲ್ಲ. ಹುಡುಗರಾಗಿದ್ದಾಗಲೇ ಚಿತ್ರ ಬರೆಯುವುದರಲ್ಲಿ ನಿಸ್ಸೀಮರೆಂದು ಅರಮನೆಯಲ್ಲೆಲ್ಲ ಪ್ರಸಿದ್ಧರಾದರು. ಇದು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣ ರಾಜ ಒಡೆಯರ ಕಿವಿಗೂ ಬಿದ್ದಿತು. ಹುಡುಗನನ್ನು ಕರೆಸಿಕೊಂಡು ಪರೀಕ್ಷಿಸಿದರು ; ಅವನ ಪ್ರತಿಭೆಯನ್ನು ಮೆಚ್ಚಿಕೊಂಡರು. ಹುಡುಗನಿಗೆ ಒಳ್ಳೆಯ ಭವಿಷ್ಯವಿದೆಯೆಂದು ಕಂಡುಕೊಂಡು, ಅವನಿಗೆ ಉತ್ತಮ ಶಿಕ್ಷಣವನ್ನು ಕೊಡಿಸುವ ಏರ್ಪಾಟು ಮಾಡಿದರು.

ತಾನೇ ಪ್ರತಿಭಾಶಾಲಿಯಾಗಿದ್ದು, ಮಹಾರಾಜರಿಂದ ಮನ್ನಣೆಯನ್ನೂ ಪಡೆದ ಹುಡುಗನಿಗೆ ಸ್ವಾಭಿಮಾನ ಮೂಡುವುದು ಏನಾಶ್ಚರ್ಯ? ಆಗಿನ ಕಾಲದ ಅರಮನೆಯ ಅಧಿಕಾರಿಗಳೆಂದರೆ ಸಜ್ಜನಿಕೆ, ಗಾಂಭೀರ್ಯ, ದರ್ಪ, ಶ್ರೀಮಂತಿಕೆ ಎಲ್ಲವೂ ಇರುತ್ತಿದ್ದುವು. ಈ ಗುಣಗಳು ಹುಡುಗನಲ್ಲಿಯೂ ಮೂಡಿದುವು, ಕಡೆಗಾಲದ ವರೆಗೂ ಉಳಿದವು.

ವಿದ್ಯಾಭ್ಯಾಸ

ತಂದೆಯವರು ಬಹುಕಾಲ ಬಾಳಲಿಲ್ಲ. ಹುಡುಗನನ್ನು ಮೇಲೆ ತರುವ ಹೊಣೆಯನ್ನು ಮಹಾರಾಜರೇ ಹೊತ್ತರು. ಪ್ರತಿಭೆಯಿದೆಯೆಂದು ಕಂಡರೆ ಅದನ್ನು ಹೊರಹೊಮ್ಮಿಸಲು ಸಾಧ್ಯವಾದಷ್ಟು ಪ್ರಯತ್ನಪಡುವುದು ಈ ಮಹಾರಾಜರ ಸ್ವಭಾವ. ಅರಮನೆಯಿಂದಲೇ ವೆಂಕಟಪ್ಪನಿಗೆ ವೇತನವನ್ನು ಕೊಡಿಸಿ, ಚಿತ್ರಕಲೆಯ ಶಾಸ್ತ್ರೋಕ್ತವಾದ ಅಧ್ಯಯನಕ್ಕೆಂದು ಮದರಾಸಿಗೆ ಕಳುಹಿಸಿಕೊಟ್ಟರು. ಆಗ ದಕ್ಷಿಣದೇಶಕ್ಕೆಲ್ಲ ಮದರಾಸಿನಲ್ಲಷ್ಟೇ ಚಿತ್ರಶಾಲೆಯಿದ್ದುದು. ಆ ಚಿತ್ರಶಾಲೆಯನ್ನು ತುಂಬ ಅಚ್ಚುಕಟ್ಟಾಗಿ ನಡೆಸುತ್ತಿದ್ದರು. ಶಿಕ್ಷಣ ಮೂರು ನೆಲೆಗಳಲ್ಲಿ ಸಾಗುವ ವ್ಯವಸ್ಥೆಯಿದ್ದಿತು : ಮೂಲ, ಮಾಧ್ಯಮಿಕ, ಉನ್ನತ ಎಂದು. ಹಲವಾರು ಕಲೆಗಳನ್ನು ಕಲಿಯುವ ಸೌಲಭ್ಯವಿದ್ದಿತು. ವೆಂಕಟಪ್ಪ ಆರಿಸಿಕೊಂಡ ವಿಭಾಗಗಳು ಸ್ವಚ್ಛಂದ ರೇಖಾಚಿತ್ರ, ವರ್ಣಚಿತ್ರ ಮತ್ತು ಶಿಲ್ಪ. ಅಲ್ಲಿನ ಪರೀಕ್ಷೆಗಳಲ್ಲಿ ಉತ್ತೀರ್ಣವಾಗುವುದು ಸುಲಭವೇನಾಗಿರಲಿಲ್ಲ ; ಮೊದಲ ಬಾರಿಗೆ ದಾಟ ಹೋಗುವವರೇ ವಿರಳ !

ವೆಂಕಟಪ್ಪ ಈ ಶಾಲೆಯಲ್ಲಿ ಮೂರೂ ಹಂತಗಳ

ಪರೀಕ್ಷೆಗಳಲ್ಲಿ ಮೊದಲ ಬಾರಿಗೇ ಯಶಸ್ವಿಯಾಗಿ ಹೊರ ಬಂದುದು ಮಹಾರಾಜರಿಗೆ ತುಂಬ ಸಂತೋಷವಾಯಿತು. ವೆಂಕಟಪ್ಪನಿಗೆ ಆಗ ಇಪ್ಪತ್ತು ವರ್ಷ ವಯಸ್ಸು; ಮದರಾಸಿನಿಂದ ಮೈಸೂರಿಗೆ ಬಂದ ವರ್ಷ (೧೯೦೬). 'ಕಲಿಯುವುದು ಮುಗಿಯಿತೆ, ವೆಂಕಟಪ್ಪ?' ಎಂದು ಮಹಾರಾಜರು ಕೇಳಿದಾಗ ವೆಂಕಟಪ್ಪ 'ಕಲಿಯಬೇಕಾದುದು ಇನ್ನೂ ಇದೆ, ಮಹಾಸ್ವಾಮಿ' ಎಂದು ಹೇಳಿದರು. ಕಲೆಯ ವ್ಯಾಪ್ತಿ ಅಪರಿಮಿತವೆಂದು ಅವರಿಗೆ ಆಗಲೇ ಅರಿವಾಗಿದ್ದಿತು ; ಬದುಕೆಲ್ಲವನ್ನೂ ಸುರಿದರೂ ಕಲೆಯ ಆಳವನ್ನು ಮುಟ್ಟಲಾಗದು. ಅವರು ಲೋಕವಿಖ್ಯಾತರಾಗಿ ಸರ್ವಮಾನ್ಯರಾದ ಕಲಾವಿದರೆಂದು ಪ್ರಸಿದ್ಧರಾದಾಗಲೂ, ಇಳಿವಯಸ್ಸಿನಲ್ಲಿಯೂ ತಮ್ಮನ್ನು 'ಕಲಾ ವಿದ್ಯಾರ್ಥಿ'ಯೆಂದೇ ಕರೆದುಕೊಳ್ಳುತ್ತಿದ್ದರು ; ತಾನು ಕಲಾಪರಿಣತನೆಂದು ಎಂದೂ ಭಾವಿಸಿಕೊಳ್ಳಲಿಲ್ಲ. ಈ ವಿನಯವನ್ನು ಕಂಡು ಮಹಾರಾಜರು ಮೆಚ್ಚಿಕೊಂಡರು.

ಮದರಾಸಿನ ಕಲಿಕೆ ಮುಗಿದ ಮೇಲೆ ವೆಂಕಟಪ್ಪನಿಗೆ ಕಲಕತ್ತೆಗೆ ಹೋಗುವ ಮನಸ್ಸಾಯಿತು. ಆ ಕಾಲಕ್ಕೆ ಕಲಕತ್ತಾ ನಗರದಲ್ಲಿ ಕಲೆಯ ಬಗ್ಗೆ ಒಂದು ಆಂದೋಲನವೇ ನಡೆಯುತ್ತಿದ್ದಿತು. ಇ. ಬಿ. ಹ್ಯಾವೆಲ್ ಎಂಬ ಆಂಗ್ಲೇಯ ನಿಪುಣನು ಕಲಾ ಶಿಕ್ಷಣದಲ್ಲಿ ಶ್ರದ್ಧೆ ತಳೆದು, ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಲಲಿತ ಕಲೆಗಳನ್ನು ಉಚ್ಚಮಟ್ಟದಲ್ಲಿ ಕಲಿಸುವ ವ್ಯವಸ್ಥೆಗೆ ಕಾರಣ

ನಾದನು. ಆಗಿನ ಬಂಗಾಳಾ ಸರಕಾರವು ಮತ್ತೊಂದು ಕಲಾಶಾಲೆಯನ್ನು ತೆರೆಯಲು ನೆರವು ನೀಡಿತು. ಇಂಥ ಶಾಲೆ ಆಗ ಇಡೀ ದೇಶದಲ್ಲಿಯೇ ಎಲ್ಲೂ ಇರಲಿಲ್ಲ. ಪರ್ಸಿ ಬ್ರೌನ್ ಎಂಥ ಕಲಾಭಿಜ್ಞ ಶಾಲೆಯ ಪ್ರಿನ್ಸಿಪಲ್; ನಾಡಿನ ಅತಿಶ್ರೇಷ್ಠ ಕಲಾವಿದ. ಅವನೀಂದ್ರನಾಥ ಠಾಕುರರು ಅಲ್ಲಿ ಪಾಠ ಹೇಳುತ್ತಿದ್ದರು.

ವೆಂಕಟಪ್ಪನ ಬಯಕೆಯನ್ನು ತೀರಿಸಲು ಮಹಾರಾಜರು ಒಡನೆಯೇ ನಿಶ್ಚಯಿಸಿ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವಂತೆ ತಮ್ಮ ಸಚಿವರಿಗೆ ಸೂಚಿಸಿದರು. ಎರಡು ವರ್ಷಗಳ ಅಧ್ಯಯನಕ್ಕೆಂದು ಅರಮನೆಯಿಂದ ವೇತನವನ್ನು ಕೊಟ್ಟು ವೆಂಕಟಪ್ಪನನ್ನು ಕಳುಹಿಸಿದರು. ಎರಡು ವರ್ಷಗಳಿಗೆಂದು ಹೋದವರು ಏಳೂವರೆ ವರ್ಷಗಳು ಅವರು ಕಲಕತ್ತಾ ಶಾಲೆಯಲ್ಲಿದ್ದುಕೊಂಡು, ಬೇರೆ ಬೇರೆ ವಿಭಾಗಗಳಲ್ಲಿ ಪರಿಣತಿಯನ್ನುಗಳಿಸಿ ಬಂದರು. ವಿದ್ಯಾಭ್ಯಾಸ ಮುಗಿಸಿ ಮೈಸೂರಿಗೆ ಮರಳುವ ಮೊದಲು ಶಾಲೆಯ ಅಧ್ಯಕ್ಷನಾಗಿದ್ದ ಪರ್ಸಿ ಬ್ರೌನ್ ಮೈಸೂರು ಸರ್ಕಾರಕ್ಕೆ ಪತ್ರವೊಂದನ್ನು ಬರೆದು ಶಿಷ್ಯನನ್ನು ಮನಸಾರೆ ಕೊಂಡಾಡಿದನು.

ಗುರುಗಳ ಆದರ

ಕಲಕತ್ತಾ ಕಲಾಶಾಲೆಯಲ್ಲಿ ಅಧ್ಯಾಪಕರಾಗಿದ್ದ ಡಾ. ಅವನೀಂದ್ರನಾಥ ಠಾಕುರರ ಪ್ರಸ್ತಾಪ ಆಗಲೇ

ಬಂದಿತಷ್ಟೆ. ನಾಡಿನಲ್ಲಿ ಕಲೆಯ ಪುನರುಜ್ಜೀವನಕ್ಕೆ
ಶ್ರಮಿಸಿದ ಈ ಮಹಾಪುರುಷರು ಕುಂಚವನ್ನು ಹಿಡಿ
ದರೆ ಬ್ರಹ್ಮನೇ! ವಿಶ್ವಕವಿ ರವೀಂದ್ರನಾಥ ಠಾಕುರರ
ಹೆಸರನ್ನು ನೀವು ಕೇಳಿದ್ದೀರಲ್ಲವೆ? ಇವರ ತಂದೆ
ಮಹರ್ಷಿ ದೇವೇಂದ್ರನಾಥ ಠಾಕುರರ ತಮ್ಮ ಗಿರೀಂದ್ರ
ನಾಥರ ಮೊಮ್ಮಗನೇ ಅವನೀಂದ್ರನಾಥರು; ಅವರ
ತಂದೆ ಗುಣೇಂದ್ರನಾಥರೆಂಬುವರು. ಅವನೀಂದ್ರನಾಥರು
೧೮೭೧ರಲ್ಲಿ ಹುಟ್ಟಿ ೧೯೫೧ರಲ್ಲಿ ತೀರಿಕೊಂಡರು. ಅವ
ರಂತೆಯೇ ಅವರ ಅಣ್ಣ ಗಗನೇಂದ್ರನಾಥರೂ (೧೮೬೭-
೧೯೩೮) ದೊಡ್ಡ ಕಲಾವಿದರಾಗಿದ್ದರು. ಈ ಅಣ್ಣ-
ತಮ್ಮಂದಿರಿಬ್ಬರೂ ರವೀಂದ್ರನಾಥರ ಶಾಂತಿನಿಕೇತನದ
ಯೋಜನೆಯಲ್ಲಿ ತುಂಬ ನೆರವಾದರು. ಠಾಕುರ ಮನೆ
ತನವೇ ಪ್ರತಿಭಾಶಾಲಿಗಳ ಮನೆತನ; ಒಂದೊಂದು
ತಲೆಮಾರಿನಲ್ಲಿಯೂ ವಿದ್ವಾಂಸರು, ಕವಿಗಳು, ಚಿತ್ರ
ಕಾರರು, ಸಾಹಿತಿಗಳು, ಸಮಾಜ ಸುಧಾರಕರು, ತಪಸ್ವಿ
ಗಳು ಈ ಮನೆತನದಲ್ಲಿ ಆಗಿಹೋಗಿದ್ದಾರೆ. ಇಂಥ ಪ್ರತಿ
ಭಾವಂತರ ನಡುವೆ ರವೀಂದ್ರನಾಥರೂ ಅವನೀಂದ್ರ
ನಾಥರೂ ಸುಪ್ರಸಿದ್ಧರಾಗಿದ್ದರು.

ಕಲಕತ್ತಾ ಶಾಲೆಯಲ್ಲಿ ಅವನೀಂದ್ರನಾಥರೇ ವೆಂಕ
ಟಪ್ಪನಿಗೆ ಗುರುಗಳು. ಗುರು-ಶಿಷ್ಯರ ನಡುವೆ ನೆಂಟು
ತುಂಬ ಅಚ್ಚುಮೆಚ್ಚಿನದಾಯಿತು. ವೆಂಕಟಪ್ಪ ಗುರುವಿನ
ಬಗ್ಗೆ ಭಕ್ತಿಭಾವವನ್ನಿಟ್ಟು, ಅವರ ಬಳಿ ತಾವು ಕಲಿಯು

ವಾಗ ಅರೆಗಳಿಗೆಯನ್ನೂ ಪೋಲು ಮಾಡದೆ, ನಗರದ ಯಾವ ಆಕರ್ಷಣೆಗೂ ಮನಸೋಲದೆ, ಹಸಿವೆ-ನಿದ್ದೆಗಳನ್ನೂ ಗೆದ್ದು ವರ್ಣಚಿತ್ರಕಲೆಯನ್ನು ವಶ ಮಾಡಿಕೊಂಡರು. ಅವರು ವಿದ್ಯಾರ್ಥಿಯಾಗಿದ್ದಾಗ ಬೇರೆ ಯಾವ ವ್ಯವಹಾರದಲ್ಲಿಯೂ ಆಸಕ್ತರಾಗದೆ ಎಚ್ಚರದ ವೇಳೆಯನ್ನೆಲ್ಲ ಕಲೆಗೇ ವಿನಿಯೋಗಿಸಿದರು. ನಾಲ್ಕು ಗಂಟೆ ನಿದ್ರೆಯಷ್ಟೇ ರಾತ್ರಿಯಲ್ಲಿ ಅವರು ಮೈಮರೆಯುತ್ತಿದ್ದ ಸಮಯ; ಉಳಿದಂತೆ ಬೆಳಗಿನಿಂದ ಸಂಜೆಯವರಿಗೂ ಶಾಲೆಯಲ್ಲಿಯೂ, ತಾವು ಉಳಿದುಕೊಂಡಿದ್ದ ಕೊಠಡಿಯಲ್ಲಿಯೂ ಕಲೆಯ ಅಭ್ಯಾಸವೇ. ಇದನ್ನು 'ರಾಕ್ಷಸಸಾಧನೆ'ಯೆಂದು ಕೆಲವರು ಕರೆದರು. ಆದರೆ ಗುರುಗಳು ಈ ನಿಷ್ಠೆಯನ್ನು ನೋಡಿ ಬೆರಗಾಗಿ, ಮೆಚ್ಚಿಕೊಂಡು, ಕಲೆಯ ಜೀವಾಳವನ್ನೆಲ್ಲ ಶಿಷ್ಯನಿಗೆ ಏನೂ ಸಂಕೋಚವಿಲ್ಲದೆ, ಹಿಡಿತವಿಲ್ಲದೆ ಧಾರೆಯೆರೆದರು.

ಅವನೀಂದ್ರನಾಥರು ವೆಂಕಟಪ್ಪನನ್ನು 'ಅಪ್ಪ' ಎಂದು ಕರೆಯುತ್ತಿದ್ದರು; ಸಹಪಾಠಿಗಳಾದ ನಂದಲಾಲ ವಸು, ಆಸಿತಕುಮಾರ ಹಾಲ್ದಾರ, ಮುಕುಲಚಂದ್ರ ದೇ ಮೊದಲಾದವರಿಗೆಲ್ಲ ಅವರು 'ಅಪ್ಪ'ನೇ. ಅವನೀಂದ್ರನಾಥರು ಒಮ್ಮೆ 'ಅಪ್ಪನಿಗೆ ಕಲೆಯೇ ಹೆಂಡತಿ, ಕಲೆಯೇ ಮಕ್ಕಳು. ಅವನೇನು ಮದುವೆಯಾಗುವ ಹಾಗಿಲ್ಲ' ಎಂದರಂತೆ. ದಿಟವಾಗಿ ಹಾಗೆಯೇ ಆಯಿತು. ವೆಂಕಟಪ್ಪ ಮದುವೆಯಾಗದೆ ಆಜೀವಬ್ರಹ್ಮಚಾರಿ ಯಾಗಿಯೇ

ಉಳಿದರು ; ಉಸಿರಿರುವವರೆಗೂ ಕಲೆಯೊಂದನ್ನೇ ಪ್ರೀತಿಸಿದರು, ಅದಕ್ಕಾಗಿಯೇ ಶ್ರಮಿಸಿದರು. ಇದನ್ನು ಅವರು ಗುರುಗಳ ಆಶೀರ್ವಾದವೆಂದು ಬಗೆದಿದ್ದರು. ಅವನೀಂದ್ರನಾಥರಲ್ಲಿ ಕಲೆಯ ಶೈಲಿ, ಕಲಾಕಾರ್ಯದ ಸಂವಿಧಾನಗಳನ್ನು ಮಾತ್ರವಲ್ಲದೆ ಭಾವನಿಷ್ಪತ್ತಿ, ಕಲೆಯ ಅಂತರಂಗ ಇವನ್ನೂ ಅಭ್ಯಾಸ ಮಾಡಿದರು. ಅವರು ಕಲಿತದ್ದು ಗುರುಗಳಿಗೆ ಸಮಾಧಾನವನ್ನು ತಂದಿದ್ದಿತು. ತಮ್ಮ ಶೈಲಿಯನ್ನು ಅಪ್ಪನೊಬ್ಬನೇ ಮುಂದುವರಿಸುವನೆಂದು ಅವರ ವಿಶ್ವಾಸವಾಗಿದ್ದಿತು.

ಗುರುಗಳಿಗೆ ಶಿಷ್ಯನ ಮೇಲೆ ವಾತ್ಸಲ್ಯ. ಒಮ್ಮೆ ೧೯೧೪ರಲ್ಲಿ ವೆಂಕಟಪ್ಪ ಕಲಕತ್ತಾ ನಗರದಿಂದ ಪಂಚಕೇದಾರ ಯಾತ್ರೆಗೆ ಹೊರಟರು. ಆ ಕಾಲಕ್ಕೆ ತುಂಬ ದುಸ್ತರವಾದ ಯಾತ್ರೆ ಅದು ; ಕಾಲ್ನಡಿಗೆಯಲ್ಲಿಯೇ ಆರುನೂರು ಮೈಲಿಗಳು ಹೋಗಬೇಕಾಗಿದ್ದಿತು. ಹೊರಟವರು ಹಿಂದಿರುಗಿ ಬರುವರೆಂಬ ನಂಬಿಕೆಯಿರುತ್ತಿರಲಿಲ್ಲ. ತಮ್ಮ ನಿಶ್ಚಯವನ್ನು ವೆಂಕಟಪ್ಪ ಗುರುಗಳ ಮುಂದೆ ಹೇಳಿದಾಗ ಅವನೀಂದ್ರನಾಥರು "ಓಹೋ ! ಹಾಗಾದರೆ ನಾನು ನಿನ್ನನ್ನು ಮತ್ತೆ ಕಾಣಲಾರೆ !" ಎಂದಂದು ಒಡನೆಯೇ ಮನೆಯ ಮಕ್ಕಳನ್ನೆಲ್ಲ ಕೂಗಿ ಕರೆದು, "ನೋಡಿ, ನೋಡಿ! ಕಡೆಯ ಬಾರಿಗೆ ಅಪ್ಪನನ್ನು ನೋಡಿಬಿಡಿ !" ಎಂದರಂತೆ.

ಲೇಡಿ ಹೆರಿಂಗ್‌ಹ್ಯಾಂ ಎಂಬಾಕೆ ೧೯೦೯ರಿಂದ

೧೯೧೧ರ ವರೆಗೂ ಅಜಂತಾ ಭಿತ್ತಿಚಿತ್ರಗಳ ಪ್ರತಿಕೃತಿಗಳನ್ನು ಸಿದ್ಧಪಡಿಸುವ ಕೆಲಸವನ್ನು ಕೈಕೊಂಡು ಅವನೀಂದ್ರನಾಥರ ನೆರವನ್ನು ಬಯಸಿದಳು. ಅವನೀಂದ್ರನಾಥರು "ಈ ಕೆಲಸ ಕಷ್ಟಕರವಾದುದು; ಸಾಮಾನ್ಯ ಕಲಾವಿದರಿಂದ ಆಗುವ ಕೆಲಸವಲ್ಲ. ವೆಂಕಟಪ್ಪನೊಬ್ಬನು ಮಾತ್ರ ಇದನ್ನು ಮಾಡಬಲ್ಲ" ಎಂದು ಹೇಳಿ ವೆಂಕಟಪ್ಪನನ್ನೇ ಆಕೆಯೊಂದಿಗೆ ಕಳುಹಿಸಿದರು. ವೆಂಕಟಪ್ಪನಿಗಾಗಿ ನೆರವಾಗಿ ನಂದಲಾಲವಸು, ಅಸಿತಕುಮಾರ ಹಾಲ್ದಾರ ಮತ್ತು ಸಮರೇಂದ್ರನಾಥ ಗುಪ್ತ ಇವರೂ ಹೊರಟರು. ವೆಂಕಟಪ್ಪ ತಯಾರಿಸಿದ ಚಿತ್ರಗಳು ಅದ್ಭುತವಾಗಿದ್ದುವೆಂದು ಗುರುಗಳು ಸಂತೋಷಪಟ್ಟರು. ಆದರೆ ಬೆಂಕಿಯ ಆಕಸ್ಮಿಕವೊಂದರಲ್ಲಿ ಈಕೆಯ ಸಂಗ್ರಹವೆಲ್ಲವೂ ಸುಟ್ಟು ಬೂದಿಯಾಯಿತು; ವೆಂಕಟಪ್ಪನವರ ಕೆಲಸದ ಒಂದು ತುಣುಕೂ ಉಳಿಯಲಿಲ್ಲ, ನಮ್ಮ ದುರ್ದೈವ.

ಅವನೀಂದ್ರನಾಥರ ಮೂಲಕ ವೆಂಕಟಪ್ಪನವರಿಗೆ ವಿಶ್ವಕವಿ ರವೀಂದ್ರನಾಥಠಾಕೂರರ ನಿಕಟ ಪರಿಚಯವೂ ಆಯಿತು. ರವೀಂದ್ರನಾಥರಿಗೂ 'ಅಪ್ಪ'ನೆಂದರೆ ಅಚ್ಚುಮೆಚ್ಚು. ಕನ್ನಡ ಸೀಮೆಯಿಂದ ಯಾರಾದರೂ ಅವರನ್ನು ಕಾಣಲು ಹೋದಾಗ, ಅವರು ಮಾಡುತ್ತಿದ್ದ ಮೊದಲ ಪ್ರಶ್ನೆ 'ವೆಂಕಟಪ್ಪ ಹೇಗಿದ್ದಾರೆ? ಈಚೆಗೆ ಏನು ಮಾಡುತ್ತಿದ್ದಾರೆ?' ಎಂದು. ಅಷ್ಟು 'ಮೈಸೂರೆಂದರೆ ವೆಂಕಟಪ್ಪ' ಎನ್ನುವ ಭಾವನೆ ಅವರಿಗೆ.

ಸ್ವಭಾವದಲ್ಲಿಯೇ ಇದ್ದ ಕಲಾಪ್ರವೃತ್ತಿಗೆ ಸಮರ್ಥ ರಾದ ಗುರುಗಳ ಮಾರ್ಗದರ್ಶನ ದೊರಕಿದುದು ಸೌಭಾಗ್ಯವೆಂದೇ ಹೇಳಬೇಕು. ತಮ್ಮ ಎಡೆಬಿಡದ ಅಭ್ಯಾಸದಿಂದ ನಿಷ್ಠೆಯ ಸಾಧನೆಯಿಂದ ಗುರುಗಳ ಸಿದ್ಧಿ ಯನ್ನು ತಾವೂ ಜೀರ್ಣಿಸಿಕೊಂಡರು.

ಸರಕಾರದೊಂದಿಗೆ ವಿರಸ

ವೆಂಕಟಪ್ಪ ಕಲಕತ್ತಾ ಕಲಾಶಾಲೆಯಲ್ಲಿ ಏಳೂವರೆ ವರ್ಷ ವ್ಯಾಸಂಗ ಮಾಡಿ ಮೈಸೂರಿಗೆ ಹಿಂದಿರುಗಿದಾಗ, ಕಲಾಶಾಲೆಯ ಪ್ರಿನ್ಸಿಪಲ್ ಆಗಿದ್ದ ಪರ್ಸಿ ಬ್ರೌನ್ ಮೈಸೂರು ಸರ್ಕಾರಕ್ಕೆ ಕಾಗದವೊಂದನ್ನು ಬರೆದು "ನೀವು ಕಳುಹಿಸಿದ ವಿದ್ಯಾರ್ಥಿ ವೆಂಕಟಪ್ಪ ತುಂಬ ಸಮರ್ಥ; ಅವನಿಗೆ ಉಜ್ಜ್ವಲವಾದ ಭವಿಷ್ಯವಿದೆ. ಶಿಲ್ಪದಲ್ಲಿ ಅವನ ಒಲವು ಹೆಚ್ಚಿರುವಂತೆ ತೋರುತ್ತದೆ. ಈ ವಿಭಾಗದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಅವನನ್ನು ಲಂಡನ್ನಿನ ಸೌತ್ ಕೆನ್‌ಸಿಂಗ್‌ಟನ್ ವಿಭಾಗದಲ್ಲಿರುವ ರಾಯಲ್ ಕಾಲೇಜ್ ಆಫ್ ಫೈನ್‌ಆರ್ಟ್ಸ್‌ಗೆ ಕಳುಹಿಸಿ. ಅಲ್ಲಿ ಪ್ರವೇಶದ ವ್ಯವಸ್ಥೆಯನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ಸಲಹೆ ಮಾಡಿದರು. ಮೈಸೂರು ಸರಕಾರವೂ ಈ ಸೂಚನೆಗೆ ಒಪ್ಪಿತು; ವೆಂಕಟಪ್ಪನನ್ನು ಲಂಡನ್ನಿಗೆ ಕಳುಹಿಸುವ ಸನ್ನಾಹ ಮಾಡತೊಡಗಿತು.

ಅಷ್ಟರಲ್ಲಿ ವಿಶ್ವದ ಮೊದಲ ಮಹಾಯುದ್ಧ

ಆರಂಭವಾಗಿಬಿಟ್ಟಿತು. ವಿದ್ಯಾಭ್ಯಾಸಕ್ಕೆಂದು ಯಾರೂ ದೇಶ ಬಿಟ್ಟು ಹೊರಗೆ ಹೋಗುವುದು ಕಷ್ಟವಾಯಿತು. ಇಷ್ಟಾದರೂ ಮೈಸೂರು ಸರ್ಕಾರ ವೆಂಕಟಪ್ಪನನ್ನು ಲಂಡನ್ನಿಗೆ ಕಳುಹಿಸುವ ಯೋಚನೆಯನ್ನೇನೂ ಕೈಬಿಡಲಿಲ್ಲ. ಆದರೆ ಪೆರ್ಸಿ ಬ್ರೌನ್ ಮತ್ತೆ ಸರಕಾರಕ್ಕೆ ಬರೆದ- "ವೆಂಕಟಪ್ಪನ ಜೀವ ದೊಡ್ಡದು, ದೇಶಕ್ಕೆ ತುಂಬ ಬೇಕಾಗಿರುವ ಚೇತನ ಅದು. ಇಂಥ ಅನಿಶ್ಚಿತ, ವಿಷಮ ಸಂದರ್ಭದಲ್ಲಿ ಅವನನ್ನು ಪಶ್ಚಿಮ ದೇಶಗಳಿಗೆ ಕಳುಹಿಸಿ, ಅವನು ತೊಂದರೆಗೀಡಾದರೆ ನಾಡಿಗೆ ನಷ್ಟ. ಯುದ್ಧ ಮುಗಿಯುವವರೆಗೂ ಇಲ್ಲಿಯೇ ಇರಲಿ" ಎಂದು ಒತ್ತಾಯ ಮಾಡಿದರು. ಅದು ನಿಜವೇ! ಯುದ್ಧದಲ್ಲಿ ಇಂಗ್ಲೆಂಡ್ ದೇಶ ಪ್ರಮುಖವಾಗಿ ಪಾಲ್ಗೊಂಡಿದ್ದಿತು; ಯುದ್ಧದ ವಿಷಗಾಳಿ ಬೀಸುವಾಗ ಇಂಥವರೇ ಸಾಯಬೇಕೆಂಬ ನಿಯಮವಿರುತ್ತದೆಯೆ? ಮೈಸೂರು ಸರಕಾರವು ಬ್ರೌನ್‌ನ ಒತ್ತಾಯಕ್ಕೆ ಮಣಿದು ವೆಂಕಟಪ್ಪನನ್ನು ಇಂಗ್ಲೆಂಡಿಗೆ ಕಳುಹಿಸುವ ಯೋಚನೆಯನ್ನು ಸದ್ಯಕ್ಕೆ ಕೈಬಿಟ್ಟರು.

ಆದರೆ ಆಗ ಒದಗದಿದ್ದ ವಿದೇಶಯಾತ್ರೆಯ ಅವಕಾಶ ವೆಂಕಟಪ್ಪನವರಿಗೆ ಮತ್ತೆ ಬರಲೇ ಇಲ್ಲ. ಅವರು ಒಮ್ಮೆ ಆ ದೇಶಗಳಿಗೆ ಹೋಗಿದ್ದರೆ ಅವರ ಪ್ರತಿಭೆ ಲೋಕವಿಖ್ಯಾತವಾಗುತ್ತಿತ್ತು. ಅವರ ಕೀರ್ತಿ ಕನ್ನಡ ನಾಡಿನ ಗಡಿಯನ್ನು ಹಿಂದೆಯೇ ದಾಟ ಹರಡುತ್ತಿತ್ತು!

ವೆಂಕಟಪ್ಪನವರಿಗೇನೋ ತಾವು ಹೊರದೇಶಗಳಿಗೆ ಹೋಗಲಿಲ್ಲವೆಂದು ದುಗುಡವೇನಿರಲಿಲ್ಲ; ಅದನ್ನು ಬಯಸಿದವರೂ ಅಲ್ಲ, ನೊಂದುಕೊಂಡವರೂ ಅಲ್ಲ.

ಲಂಡನ್ನಿಗೆ ಹೋಗುವುದಿಲ್ಲವೆಂದಾದಾಗ, ಮಹಾರಾಜರು "ಬೇಕಿದ್ದರೆ ಮತ್ತೆ ಕೆಲವು ವರ್ಷಗಳು ವೆಂಕಟಪ್ಪ ಕಲ್ಕತ್ತಾ ಕಲಾಶಾಲೆಯಲ್ಲಿಯೇ ಇರಲಿ" ಎಂದು ಸರಕಾರಕ್ಕೆ ಸೂಚಿಸಿದರು. ಸರಕಾರವು ವೆಂಕಟಪ್ಪನಿಗೆ ವೇತನವನ್ನೂ ಮಾಸಾಶನವನ್ನೂ ಕೊಟ್ಟು ಕಲಕತ್ತಾ ನಗರಕ್ಕೆ ಕಳುಹಿಸುವ ಏರ್ಪಾಡು ಮಾಡಿತು. ಆ ಕಾಲಕ್ಕೆ ಸರಕಾರ ಅವರಿಗೆ ಕೊಡಲೊಪ್ಪಿದ್ದ ಹಣ ಕಡಿಮೆಯೇನಲ್ಲ. ಆದರೆ ವೆಂಕಟಪ್ಪ "ಅಲ್ಲಿ ಕಲಿಯಬೇಕಾದುದನ್ನೆಲ್ಲ ಕಲಿತಿದ್ದೇನೆ; ಇನ್ನು ಅಲ್ಲಿ ಕಲಿಯಬೇಕೆಂಬ ಆಸಕ್ತಿಯೇನಿಲ್ಲ. ಮೇಲಾಗಿ, ಆ ದೊಡ್ಡ ಊರಿನ ಬದುಕು ನನಗೆ ಒಂಟುವುದಿಲ್ಲ!" ಎಂದುಬಿಟ್ಟರು. ಸರಕಾರ ನೆರವಾಗುವುದೆಂದು ಉಪಯೋಗವಿಲ್ಲದ ಕೆಲಸ ಮಾಡಲು ಅವರು ಸಿದ್ಧರಾಗಿರಲಿಲ್ಲ. ಸರಕಾರ ತೋರಿಸಿದ ಇನ್ನಷ್ಟು ಆರ್ಥಿಕ ನೆರವಿನ ಆಸೆ ಅವರ ನಿರ್ಧಾರವನ್ನು ಬದಲು ಮಾಡಲಿಲ್ಲ.

ಮೈಸೂರು ಸರಕಾರದ ಅಧಿಕಾರಿಗಳಿಗೆ ವೆಂಕಟಪ್ಪ ಹಟಮಾರಿಯೆನಿಸಿದರು. ಕೆಲವರು ವಿಶ್ವಾಸಿಗಳು ಅವರನ್ನು ಕರೆಸಿಕೊಂಡು "ಸರಕಾರ ಹೋಗೆಂದರೆ ಹೋಗಬೇಕು; ಆದರಿಂದ ನಿನಗೇನು ನಷ್ಟ? ನಿನ್ನ ಯೋಗ

ಕ್ಷೇಮ, ವಿದ್ಯಾಭ್ಯಾಸ, ಪ್ರಯಾಣ ಎಲ್ಲವನ್ನೂ ಸರಕಾರವೇ ನೋಡಿಕೊಳ್ಳುತ್ತದೆಯಲ್ಲವೆ? ಮೇಲೆ ಬರಲು ಬಯಸುವವರು ಸರಕಾರವನ್ನು ಎದುರು ಹಾಕಿಕೊಳ್ಳಬಾರದು" ಎಂದು ಬುದ್ಧಿ ಹೇಳಿದರು. ವೆಂಕಟಪ್ಪನೇನು ಜಗ್ಗಲಿಲ್ಲ. "ಅಗತ್ಯವಿಲ್ಲದೆ ಸರಕಾರ ತನ್ನ ಮೇಲೆ ವೆಚ್ಚ ಮಾಡುವುದಾದರೂ ಏಕೆ? ಹಣ ಕೊಟ್ಟ ಮಾತ್ರಕ್ಕೆ ತಪ್ಪಾದುದು ಸರಿಯಾಗಿಬಿಡುತ್ತದೆಯೆ?" ಎಂದು ಅವರ ವಾದ.

ಕಡೆಗೆ ಸರಕಾರ ವೆಂಕಟಪ್ಪನಿಗೆ ಬೆದರಿಕೆಯನ್ನೂ ಹಾಕಿತು. "ಸರಕಾರ ನಿರ್ಧರಿಸಿದಂತೆ ಕಲಕತ್ತಾ ಕಲಾಶಾಲೆಗೆ ಸೇರದಿದ್ದರೆ, ನಿಮಗೆ ಮುಂದೆ ಯಾವ ಬಗೆಯ ಸಹಾಯವೂ ಸಹಕಾರವೂ ಸರಕಾರದಿಂದ ಒದಗಲಾರದು" ಎಂದು ಸ್ಪಷ್ಟಪಡಿಸಿದ ಪತ್ರವೊಂದು ಅವರ ಕೈ ಮುಟ್ಟಿತು. ಈ ಬೆದರಿಕೆಗೆ ಬಗ್ಗುವವರೇ ವೆಂಕಟಪ್ಪ? "ನಾನು ಸರಕಾರದಿಂದ ಯಾವ ನೆರವನ್ನೂ ನಿರೀಕ್ಷಿಸುವುದಿಲ್ಲ" ಎಂದು ಇವರೂ ಸ್ಪಷ್ಟಪಡಿಸಿ ಸರಕಾರಕ್ಕೆ ಬರೆದುಬಿಟ್ಟರು! ಇದು ನಡೆದದ್ದು ೧೯೧೭ರಲ್ಲಿ; ಆಗ ಅವರಿಗೆ ಮೂವತ್ತೊಂದರ ಪ್ರಾಯ. ಮೊದಲೇ ಬೆಳೆದುಬಂದಿದ್ದ ಸ್ವಾಭಿಮಾನದ ಜೊತೆಗೆ, ತನಗೆ ಸರಿಯೆಂದು ತೋರಿದುದನ್ನು ಮಾತ್ರ ಮಾಡುವ ಹಟವೂ ಬೇರೂರಿದ್ದಿತು. ಯಾವುದಕ್ಕೂ ಹೆದರುವ ಸ್ವಭಾವವಲ್ಲ; ಗಟ್ಟಿ ಗುಂಡಿಗೆ ಅವರದ್ದು. ಈಗಿನಂತೆ ಪ್ರಜಾತಂತ್ರವೂ ಇರದ ಆ ಕಾಲ

ದಲ್ಲಿ ಸರ್ವಸ್ವತಂತ್ರವಾಗಿದ್ದ, ಸಮರ್ಥವಾಗಿದ್ದ ಸರಕಾರದ ಅಪ್ಪಣೆಯನ್ನು ಕಡೆಗಾಣಿಸಿ, ತಮ್ಮ ಕಾಲಮೇಲೆ ತಾವು ನಿಂತುದು ಅವರ ಕೆಚ್ಚನ್ನು ತೋರಿಸುತ್ತದೆ.

ವೀಣೆಯ ಹುಚ್ಚು

ಈ ವೇಳೆಗಾಗಲೇ ಅವರಿಗೆ ವೀಣೆಯ ಮೇಲೆ ಅನುರಾಗ ಅಂಕುರಿಸಿದ್ದಿತು. ಇದರ ಹಿನ್ನೆಲೆಯೂ ಅವರು ಕಲಕತ್ತಾ ಕಲಾಶಾಲೆಯಲ್ಲಿ ಓದುತ್ತಿದ್ದಾಗಲೇ ಸಿದ್ಧವಾಯಿತು. ವೆಂಕಟಪ್ಪ ಕಲಕತ್ತಾ ನಗರದಲ್ಲಿದ್ದಾಗ ಅಲ್ಲಿಗೆ ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರ್ಯರೆಂಬ ವೈಣಿಕರು ಬಂದರು. ಮೈಸೂರಿನ ಆಸ್ಥಾನ ವಿದ್ವಾಂಸರಾಗಿದ್ದ ಇವರು ಮೈಸೂರಿನ ವಿದ್ಯಾರ್ಥಿ ವೆಂಕಟಪ್ಪನ ಅತಿಥಿಯಾಗಿಯೇ ಉಳಿದುಕೊಂಡುದು ಅತಿಶಯವೇನಲ್ಲ. ಇವರು ತುಂಬ ಸೊಗಸಾಗಿ ವೀಣೆ ನುಡಿಸುತ್ತಿದ್ದರು. ಅವರ ಗುರುಗಳು ಯಾರು ಗೊತ್ತೆ? ವೈಣಿಕ ಶಿಖಾಮಣಿ ಶೇಷಣ್ಣನವರು. ಅರಮನೆಯಲ್ಲಿ ಗುರುಗಳ ಮೂಲಕ ಸನ್ಮಾನವನ್ನು ಪಡೆದು ಉತ್ತರ ದೇಶದ ಯಾತ್ರೆಯನ್ನು ಕೈಗೊಂಡು ಕಲಕತ್ತಾ ನಗರಕ್ಕೆ ಬಂದಿದ್ದರು. ಆ ನಗರದ ವೈಭವವನ್ನು ಕಂಡು ಬೆರಗಾಗಿ ಅಲ್ಲೇ ಬಿಡಾರ ಹೂಡುವ ಆಲೋಚನೆ ಅವರಿಗೆ ಬಂದಿತು. ನಗರದಲ್ಲಿ ನೂರಾರು ದಾಕ್ಷಿಣಾತ್ಯ ಕುಟುಂಬಗಳಿದ್ದುವು; ಮೈಸೂರು ಕಡೆಯುವರೂ ತಮಿಳು ದೇಶದವರೂ

ಹಲವರಿದ್ದರು. ಅವರ ಮನೆಗಳಲ್ಲಿ ಮಕ್ಕಳಿಗೆ ವೀಣೆ ಪಾಠ ಹೇಳಿಕೊಟ್ಟು ತಮ್ಮ ಬದುಕನ್ನು ಪಡೆದುಕೊಳ್ಳುವ ಯೋಚನೆ ಅವರದ್ದು.

ಈ ವಿಚಾರವನ್ನು ಅವರು ವೆಂಕಟಪ್ಪನ ಮುಂದೆ ಹೇಳಿದರು. ವೆಂಕಟಪ್ಪ ಆ ಊರಿನಲ್ಲಿ ಐದಾರು ವರ್ಷ ಇದ್ದವರಷ್ಟೆ. ಅವರಿಗೆ ಪರಿಚಿತರು ಅನೇಕರಿದ್ದರು. ವೆಂಕಟಪ್ಪ ರಾಮಸ್ವಾಮಿ ಅಯ್ಯಂಗಾರ್ಯರಿಗೆ ಹಲವು ಗಣ್ಯ ವ್ಯಕ್ತಿಗಳ ಪರಿಚಯಮಾಡಿಕೊಟ್ಟು ಜೀವನೋಪಾಯಕ್ಕೆ ನೆರವಾದರು. ~~ವೈಣಿಕರಿಗೆ ಪಾಠದ ಮನೆಗಳು ಹತ್ತಾರು ದೊರೆತು ನೆಮ್ಮದಿಯಿಂದ ಬೇರೂರುವಂತಾಯಿತು.~~

ಅಯ್ಯಂಗಾರ್ಯರು ವೆಂಕಟಪ್ಪ ತಮಗೆ ಮಾಡಿದ ಉಪಕಾರವನ್ನು ಹೇಗಾದರೂ ತೀರಿಸಬೇಕೆಂದು ಹವಣಿಸುತ್ತಿದ್ದರು. "ವೆಂಕಟಪ್ಪ, ನಿನ್ನ ಋಣವನ್ನು ನಾನು ತೀರಿಸಬೇಡವೆ ? ಆದರೆ ನನಗಿರುವುದೊಂದೇ ಧನ - ಈ ಸಂಗೀತ ವಿದ್ಯೆ. ನಿನಗೆ ಸ್ವಲ್ಪ ಸಂಗೀತವನ್ನು ಹೇಳಿಕೊಡುತ್ತೇನೆ, ಕಲಿತುಕೋ !" ಎಂದರು. ಆದರೆ ವೆಂಕಟಪ್ಪ "ಅಯ್ಯೋ ಸ್ವಾಮಿ, ನನಗೆ ಚಿತ್ರಕಲೆಯೊಂದೇ ಸಾಕು, ಅದೇ ನನ್ನ ಸರ್ವಸ್ವ ! ಅದಕ್ಕೇ ಸಮಯವಿಲ್ಲ, ಇನ್ನು ಸಂಗೀತಕ್ಕೆಲ್ಲಿ ತರಲಿ ?" ಎಂದುಬಿಟ್ಟರು. ದಿಟವಾಗಿ ಆ ಕಾಲಕ್ಕೆ ಅವರಿಗೆ ಸಂಗೀತದಲ್ಲಿ ಒಲವೂ ಅಷ್ಟಾಗಿ ಇರಲಿಲ್ಲ. ಆದರೆ ಅಯ್ಯಂಗಾರ್ಯರೇನು ಸುಲಭಕ್ಕೆ ಬಿಡುವ ಆಸಾಮಿಯಾಗಿರಲಿಲ್ಲ ; ಪದೇ ಪದೇ ಪೀಡಿಸುತ್ತಲೇ ಇದ್ದರು.

ಅಯ್ಯಂಗಾರ್ಯರ ಅದೃಷ್ಟ ಚೆನ್ನಾಗಿದ್ದಿತೆಂದು ತೋರುತ್ತದೆ. ಆ ಕಾಲಕ್ಕೆ ವೆಂಕಟಪ್ಪನ ಬಳಿ ವೀಣೆಯೊಂದು ಹೇಗೋ ಸೇರಿದ್ದಿತು. ಅದು ಅವರ ಬಳಿ ಬಂದುದೂ ಸ್ವಾರಸ್ಯವಾದ ಕತೆಯೇ. ಅವರ ಗುರುಗಳಾದ ಅವನೀಂದ್ರನಾಥ ಠಾಕುರರ ಐರೋಪ್ಯ ಮಿತ್ರರೊಬ್ಬರಿಗೆ ದಾಕ್ಷಿಣಾತ್ಯ ಸಂಗೀತದಲ್ಲಿ ತುಂಬ ಅಭಿರುಚಿಯಿದ್ದಿತು; ಅವರಿಗೆ ಮೈಸೂರು ಕಡೆಯ ವೀಣೆಯೊಂದು ಬೇಕಾಗಿದ್ದಿತು. ವೆಂಕಟಪ್ಪ ಮೈಸೂರಿನವರಾದುದರಿಂದ ಅವನೀಂದ್ರನಾಥರು ಮೈಸೂರಿನಿಂದ ವೀಣೆಯೊಂದನ್ನು ತರಿಸಿಕೊಡುವ ಕೆಲಸವನ್ನು ಅವರಿಗೆ ಒಪ್ಪಿಸಿದರು. ವೆಂಕಟಪ್ಪನೂ ಮೈಸೂರಿಗೆ ಬರೆದು, ವೀಣೆಯುನ್ನು ಮಾಡಿಸಿ, ತರಿಸಿದರು. ಆದರೆ ವೀಣೆ ಕಲಕತ್ತಾ ನಗರವನ್ನು ಮುಟ್ಟುವ ವೇಳೆಗೆ ಅವನೀಂದ್ರನಾಥರ ಮಿತ್ರರು ಸ್ವದೇಶಕ್ಕೆ ಹಿಂದಿರುಗಿಬಿಟ್ಟದ್ದರು. ಹೀಗೆ ಅವರಿಗೆಂದು ತರಿಸಿದ ವೀಣೆ ವೆಂಕಟಪ್ಪನ ಬಳಿಯೇ ಉಳಿಯಿತು. ಅದು ಈಗ ಪ್ರಯೋಜನಕ್ಕೆ ಬಂದಿತು. ಹೀಗೆ ಅದು ಪ್ರಯೋಜನಕ್ಕೆ ಬರಬಹುದೆಂದು ವೆಂಕಟಪ್ಪ ಕನಸಿನಲ್ಲೂ ಕಂಡಿರಲಿಲ್ಲ.

ಅಂತೂ ರಾಮಸ್ವಾಮಿ ಅಯ್ಯಂಗಾರ್ಯರು ಗೆದ್ದರು. ಕಡೆಗೆ ವೆಂಕಟಪ್ಪ ಸಂಗೀತ ಕಲಿಯಲು ಒಪ್ಪಿಕೊಂಡರು. ಪಾಠ ಆರಂಭವಾದುದು ೧೯೧೨ರ ಮಾರ್ಚ್ ೨೪ರಂದು ಇದನ್ನು ವೆಂಕಟಪ್ಪ ಚೆನ್ನಾಗಿ ನೆನಪಿಟ್ಟುಕೊಂಡಿದ್ದರು. ಪಾಠ ಸಾಗಿದಂತೆ ವೆಂಕಟಪ್ಪನ ಸಂಗೀತಾಭಿರುಚಿಯೂ

ಶಿಖಾಮಣಿ' ಯಾಗಿದ್ದವರು ಇವರು. ಅಷ್ಟು ಪ್ರಸಿದ್ಧ ರಾದರೂ, ಪ್ರತಿಭಾವಂತರಾದರೂ ತುಂಬ ವಿನಯಶಾಲಿಗಳು ; ಪರಮಸಾತ್ತ್ವಿಕರು, ಸಾಧು ಸ್ವಭಾವದವರು, ಸರಳ ಹೃದಯದವರು.

ವೆಂಕಟಪ್ಪನವರಿಗೆ ಚಿತ್ರಕಲೆಯಲ್ಲಿ ಅವನೀಂದ್ರನಾಥ ಠಾಕುರರಿದ್ದಂತೆ ಸಂಗೀತದಲ್ಲಿ ಶೇಷಣ್ಣನವರು ; ಇಬ್ಬರೂ ತಂತಮ್ಮ ಕಲಾ ವಿಭಾಗದಲ್ಲಿ ತುತ್ತತುದಿಯನ್ನು ಮುಟ್ಟಿದ್ದವರು, ಗಂಧರ್ವಾಂಶ ಪಡೆದವರು. ವೆಂಕಟಪ್ಪನ ಸಂಸ್ಕಾರವನ್ನು ಅರಳಿಸಲು, ಹಿಗ್ಗಿಸಲು ಇವರು ನೆರವಾದರು, ನೀರೆರೆದರು.

ರಸಿಕರಾಗಿದ್ದ ವೆಂಕಟಪ್ಪನಿಗೆ ಶೇಷಣ್ಣನವರ ವೀಣಾವಾದನವನ್ನು ಕೇಳಿ ಪ್ರಪಂಚದಲ್ಲಿ ಬೇರೊಂದೂ ಬೇಡವಾಯಿತು. ವೀಣೆಯ ಸೌಂದರ್ಯ ಮತ್ತು ಅಸಾಧಾರಣ ಸಾಮರ್ಥ್ಯ ಅವರನ್ನು ಬಿಗಿದಪ್ಪಿತು. ಶೇಷಣ್ಣನವರ ಅದ್ಭುತವಾದ ಪ್ರತಿಭೆ, ಮಧುರವಾದ ವ್ಯಕ್ತಿತ್ವ, ವಿಪುಲವಾದ ಕಲ್ಪನಾಜಾಲ, ಎಲ್ಲವೂ ವೆಂಕಟಪ್ಪನ ಹೃದಯವನ್ನು ಸೂರೆಗೊಂಡವು. ತಾವು ಅವನೀಂದ್ರನಾಥರಲ್ಲಿ ಏಳುವರ್ಷ ಕಲಿತ ಚಿತ್ರಕಲೆಯನ್ನು ಮರೆತು ಬಿಟ್ಟರು ; ಶೇಷಣ್ಣನವರಲ್ಲಿ ಅಭ್ಯಾಸಮಾಡತೊಡಗಿದಂದಿನಿಂದ ಒಂದು ದಿನವೂ ಕುಂಚವನ್ನು ಮುಟ್ಟಲಿಲ್ಲ! ಎಚ್ಚರವಾಗಿರುವಾಗಲೆಲ್ಲ ವೀಣೆಯ ಗುಂಗೇ. ಕಲಕತ್ತ ಕಲಾಶಾಲೆಯಲ್ಲಿರುವಾಗ ಮಾಡಿದಂತೆಯೇ ಇಲ್ಲಿಯೂ ಅಸುರ ಸಾಧನೆಯೇ.

ಇಂಥ ಶಿಷ್ಯನನ್ನು ಯಾರು ಮೆಚ್ಚಿಕೊಳ್ಳುವುದಿಲ್ಲ? ಶೇಷಣ್ಣನವರಿಗೆ ವೆಂಕಟಪ್ಪನೆಂದರೆ ಎಲ್ಲಿಲ್ಲದ ಪ್ರೇಮ. ಉಳಿದ ಶಿಷ್ಯರೆಲ್ಲ ಹೋದ ಮೇಲೆ ರಾತ್ರಿ ಸರಿಹೊತ್ತಿನ ವರೆಗೂ ವೆಂಕಟಪ್ಪನವರನ್ನು ಮಾತ್ರ ಕೂರಿಸಿಕೊಂಡು ಅವರಿಗೆ ಕಲಿಸುವರು ; ಧಾರಾಳವಾಗಿ, ಮುಚ್ಚುಮರೆ ಯಿಲ್ಲದೆ, ಉತ್ಸಾಹದಿಂದ ಪಾಠಹೇಳುವರು. 'ವೆಂಕ ಟಪ್ಪನೊಬ್ಬ ನನ್ನ ಸಂಪ್ರದಾಯವನ್ನು ಉಳಿಸುತ್ತಾನೆ' ಎಂದು ಹೆಮ್ಮೆಯಿಂದ, ವಿಶ್ವಾಸದಿಂದ ಹೇಳುತ್ತಿದ್ದರು. ವಾದ್ಯದಿಂದ ಸುನಾದ ಎದ್ದು ಬರುವ ವೈಖರಿ ಶೇಷಣ್ಣ ನವರಾದ ಮೇಲೆ ವೆಂಕಟಪ್ಪನವರಲ್ಲಿಯೇ ಕಾಣಬಹು ದಾಗಿತ್ತು. ವಾದ್ಯಗುಣ, ರಾಗನಿರೂಪಣೆಯಲ್ಲಿ ವಿಸ್ತಾರ, ಮಾರ್ದವ, ಕಲ್ಪನೆಯಲ್ಲಿ ಹೊಸಹೊಸ ಹಾದಿಗಳು ಎಲ್ಲ ವನ್ನೂ ವೆಂಕಟಪ್ಪ ಶೇಷಣ್ಣನವರಿಂದ ಕಲಿತರು.

ವೆಂಕಟಪ್ಪನ ಸಂಗೀತಾಭ್ಯಾಸ ಆತ್ಮತೃಪ್ತಿಗೆ ಅಷ್ಟೆ ; ಸಭಾರಂಜನೆಗಾಗಿ ಅಲ್ಲ, ಜೀವನೋಪಾಯಕ್ಕೂ ಅಲ್ಲ. ಆದುದರಿಂದ ಅವರು ಇತರರ ಮುಂದೆ ವೀಣೆಯನ್ನು ನುಡಿಸುತ್ತಲೇ ಇರಲಿಲ್ಲ ; ಸಭೆಗಳಲ್ಲಂತೂ ಯಾರೂ ಕೇಳ ರಿಯರು. ಅವರು ಅಭ್ಯಾಸಮಾಡುವ ಸಮಯವನ್ನು ತಿಳಿದುಕೊಂಡು, ಅವರ ಅಪ್ಪಣೆಯನ್ನು ಪಡೆದು ಕೊಂಡು, ಅವರ ಮನೆಗೆ ಹೋದರೆ ಅವರ ನುಡಿಸು ವಿಕೆಯನ್ನು ಕೇಳಬಹುದು. ಒಂದೊಂದೇ ರಾಗ, ಎರಡು ಗಂಟೆ, ಮೂರು ಗಂಟೆ ಅದರ ಹರವು : ಮನಮುಟ್ಟುವ

ಮೀಟು, ಖಚಿತವಾದ ನಡೆ; ಆತುರವಿಲ್ಲ, ಗೊಂದಲವಿಲ್ಲ, ತಿಳಿಯಾದ ತೊರೆ ಮೆಲ್ಲನೆ ಹರಿಯುವ ರೀತಿಯಲ್ಲಿ ಅವರ ಸಂಗೀತ. ಮೂರು ಗಂಟೆ ನುಡಿಸಿದರೂ ಗಡುಸೆನ್ನ ಬಹುದಾದ ಮೀಟು ಒಂದೂ ಇರದು, ವಿಚಿತ್ರವೆನ್ನ ಬಹುದಾದ ಸಂಚಾರ ಒಂದೂ ಇಲ್ಲ.

ವೀಣೆಯ ಮೇಲೆ ಅವರಿಗಿದ್ದ ಪ್ರೀತಿ ಕಡೆಯ ತನಕ ಉಳಿಯಿತು. ವೀಣೆಯಲ್ಲಿ ಶ್ರುತಿಸ್ಥಾನಗಳಿರುವ ಬಗೆಯನ್ನೂ, ನಾದ ಹುಟ್ಟುವ ರೀತಿಯನ್ನೂ, ವಾದ್ಯದ ರಚನೆಯನ್ನೂ ಆಳವಾಗಿ ಅಭ್ಯಸಿಸಿ ಶುದ್ಧನಾದವನ್ನು ಉಂಟುಮಾಡಬಹುದಾದ ಒಂದು ಹೊಸ ವೀಣೆಯನ್ನು ತಾವೇ ತಯಾರಿಸಿದರು. ಸಾಮಾನ್ಯವಾಗಿ ನಾವು ನೋಡುವ ವೀಣೆಗಳಿಗಿಂತ ಇದು ಗಾತ್ರದಲ್ಲಿ, ಉದ್ದದಲ್ಲಿ ದೊಡ್ಡದು; ಮೂವತ್ತಾರು ಅಂಗುಲ ಉದ್ದ. ಸುಮಾ ರಾಗಿ ದೊಡ್ಡ ಮೈಕಟ್ಟಿನ ಆಸಾಮಿಯೇ ಇದನ್ನು ಸರಾಗ ವಾಗಿ ನುಡಿಸಬಹುದು, ಬೇರೆಯವರಿಗೆ ಕೈಯಾಡಿಸು ವುದು ಸ್ವಲ್ಪ ಕಷ್ಟವಾಗುತ್ತದೆ. ಇದನ್ನು ಅವರು ಪುರುಷವೀಣೆಯೆಂದು ಕರೆಯುತ್ತಿದ್ದರು. ದಿಟವಾಗಿ ಇದೇ ವೀಣೆಯ ಸಹಜ ಸ್ವರೂಪವೆಂದೂ, ಶಾಸ್ತ್ರ ಶುದ್ಧ ವಾದುದೆಂದೂ ನಮ್ಮಲ್ಲಿ ಬಳಕೆಯಲ್ಲಿರುವ ವೀಣೆಗಳು ನಮ್ಮ ಅನುಕೂಲಕ್ಕೆಂದು ಮೊಟಕು ಮಾಡಿದುವೆಂದೂ ಅವರು ಹೇಳುತ್ತಿದ್ದರು. ಈ ಪುರುಷವೀಣೆಯ ಕೊಡ ವನ್ನೂ ದಂಡಿಯನ್ನೂ ಮೈಸೂರಿನಲ್ಲಿ ಶಿವರುದ್ರಪ್ಪ

ನೆಂಬ ಅನುಭವಸ್ಥನಿಂದ ಮಾಡಿಸಿ ತರಿಸಿ, ತಾವೇ ಮೇಳ ಕಟ್ಟಿದ್ದರು. ನೋಡಿದರೇ ಸಂತೋಷವಾಗುವ ವೀಣೆ ಇದು. ವೆಂಕಟಪ್ಪ ಅದನ್ನು ಮೀಟಿದರಂತೂ ಗಂಡು ನಾದ ಹೊರ ಹೊಮ್ಮುತ್ತಿತ್ತು.

ಕರ್ಣಾಟಕ ಸಂಗೀತ ಒಪ್ಪಿಕೊಂಡಿರುವ ಶ್ರುತಿಭೇದ ಈ ವೀಣೆಯಿಂದಲೇ ಸ್ಪಷ್ಟವಾಗುವುದೆಂದು ಅವರ ಆಗ್ರಹ. ಪಿಟೀಲಿಗಿರುವಂತೆ ವೀಣೆಗೂ ದಂಡಿಯ ಅಡಿಯಲ್ಲಿ ಶಬ್ದನಿಷ್ಪತ್ತಿಯ ಸೌಕರ್ಯಕ್ಕೆಂದು 'ಸೌಂಡ್ ಪೋಸ್ಟ್' ವಿಧಾನವನ್ನು ಅಳವಡಿಸಿದ್ದರು. ಇದರಿಂದಾಗಿ ಆಯಾ ಮನೆಯಲ್ಲಿ ಮೀಟದೆ ಬೆರಳಿನಿಂದ ಹೊಡೆದರೇ ಸ್ವರಸ್ಥಾನಗಳಲ್ಲಿ ಸರಿಯಾದ ನಾದ ಉತ್ಪತ್ತಿಯಾಗುವುದನ್ನು ಅವರು ವಿವರಿಸುತ್ತಿದ್ದರು.

ಉಪಕಾರ ಸ್ಮರಣೆ

ಹೀಗೆ ವೆಂಕಟಪ್ಪ ಮೈಸೂರಿನಲ್ಲಿ ಶೇಷಣ್ಣನವರ ಬಳಿ ವೀಣಾಭ್ಯಾಸಮಾಡುತ್ತಿದ್ದಾಗ ಚಿತ್ರಕಲೆಯನ್ನು ಪೂರ್ತಿ ಕೈಬಿಟ್ಟಿದ್ದರು. ಈ ಸುದ್ದಿ ಹೇಗೋ ಅವನೀಂದ್ರನಾಥರಿಗೆ ಮುಟ್ಟಿತು. ಇಷ್ಟು ಸಿದ್ಧ ಹಸ್ತನಾದ ತಮ್ಮ 'ಅಪ್ಪ' ಚಿತ್ರಕಲೆಯನ್ನು ಬಿಟ್ಟೇ ಬಿಟ್ಟುದು ಅವರ ಮನಸ್ಸಿಗೆ ತುಂಬ ಕಷ್ಟವನ್ನು ತಂದಿತು. ಒಡನೆಯೇ ಅವರು ವೆಂಕಟಪ್ಪನಿಗೆ ಆಗ್ರಹದ ಪತ್ರವೊಂದನ್ನು ಬರೆದರು; ಚಿತ್ರಕಲೆಯನ್ನು ಏನಾದರೂ ಕೈಬಿಡಬಾರದೆಂದು

ಒತ್ತಾಯಪಡಿಸಿದರು. ಇದಕ್ಕೆ ಉತ್ತರವಾಗಿ ವೆಂಕಟಪ್ಪ ಒಂದು ಸೊಗಸಾದ ವರ್ಣಚಿತ್ರವನ್ನು ರಚಿಸಿ ತಮ್ಮ ಗುರುಗಳಿಗೆ ಅರ್ಪಣೆ ಮಾಡಿದರು.

ಈ ಚಿತ್ರದ ಹೆಸರು 'ವೀಣೆಯ ಹುಚ್ಚು' ಎಂದು. ಚಿತ್ರಕಲೆಯನ್ನು ಒಂದು ದೇವತೆಯಂತೆ ರೂಪಿಸಿ ಅವಳನ್ನು ಕಟ್ಟಿ ಹಾಕಿರುವಂತೆ ಚಿತ್ರಿಸಿದ್ದಾರೆ. ಆ ಕಲೆಗೆ ಬೇಕಾದ ಕುಂಚ ಮೊದಲಾದ ಪರಿಕರಗಳು ಅಲ್ಲಲ್ಲಿ, ಅಸ್ತವ್ಯಸ್ತವಾಗಿ ಬಿದ್ದಿವೆ. ಗುರು ಅವನೀಂದ್ರನಾಥರ ಪ್ರತಿಮೆಯೊಂದು ಧೂಳು ಮುಸುಕಿ ಕುಳಿತಿದೆ. ದೊಡ್ಡದಾದ ಒಂದು ವೀಣೆಯ ಮುಂದೆ ಕಲೆಗಾರನು ಕೈಮುಗಿದು ಇದ್ದಾನೆ. ಗಡ್ಡ ಮೀಸೆಗಳು ಬೆಳೆದಿವೆ ; ಮೈಬಟ್ಟೆ ಮಾಸಲಾಗಿದೆ. ದೀಕ್ಷೆಯನ್ನು ತೊಟ್ಟಂತೆ ಕಾಣುತ್ತದೆ. ಇದರಲ್ಲಿನ ಕಲೆಗಾರ ವೆಂಕಟಪ್ಪನೇ. ವೀಣೆಗೆ ಒಲಿದು ಹುಚ್ಚನಾಗಿ ಚಿತ್ರಕಲೆಯನ್ನು ಕಟ್ಟಿಟ್ಟಿದ್ದಾನೆ. ಇದು ಅವರ ಆತ್ಮಚಿತ್ರಣ ಮತ್ತು ಗುರುದಕ್ಷಿಣೆ.

ಗುರುಗಳ ಆಗ್ರಹಕ್ಕೆ ಮಣಿದು ಅವರು ಮತ್ತೆ ಚಿತ್ರಕಲೆಯನ್ನು ಮುಂದುವರಿಸಿದರು. ಆದರೆ ವೀಣೆಯನ್ನೂ ಬಿಡಲಿಲ್ಲ. ಶೇಷಣ್ಣ ಮತ್ತು ಅವನೀಂದ್ರನಾಥ ಇಬ್ಬರೆಂದರೂ ವೆಂಕಟಪ್ಪನಿಗೆ ವಿಶೇಷವಾದ ಭಕ್ತಿ. ದಂತದ ಸಣ್ಣ ಫಲಕವೊಂದರ ಮೇಲೆ ಅವನೀಂದ್ರನಾಥರ ಕಿರು ಚಿತ್ರವೊಂದನ್ನು ಅವರು ಸಹಜ ವರ್ಣಗಳಲ್ಲಿ ಬಿಡಿಸಿದ್ದಾರೆ ; ಮಧ್ಯಕಾಲೀನ ಕಿರುಚಿತ್ರ ಪರಂ

ಪರೆಗೆ ಸೇರಿದಂತಿರುವ ಈ ಕೃತಿ ಅದ್ಭುತವಾಗಿದೆ. ಜಂತದ ಮೇಲೆ ವರ್ಣಚಿತ್ರವನ್ನು ಮೂಡಿಸುವುದು ಕಷ್ಟದ ಕೆಲಸ. ಅದನ್ನು ಹಲವಾರು ವರ್ಷಗಳು ಅಭ್ಯಾಸಮಾಡಿ ಅವರು ಯಶಸ್ವಿಗಳಾದರು. ಅವನೀಂದ್ರನಾಥರ ಈ ಚಿತ್ರ ಬಹಳ ಸಣ್ಣದಾದರೂ ಸ್ಪಷ್ಟವಾಗಿದೆ. ಕೈಯಲ್ಲಿ ಕನ್ನಡಕ ಹಿಡಿದು ನಿಂತಿರುವ ಭಂಗಿ ಸಹಜ ಸುಂದರವಾಗಿದೆ. ಗುರುವಿನ ಮೆಳ್ಳಗಣ್ಣು, ಅವರ ಕೈಮೇಲಿನ ನೀಲಿ ನರಗಳು ಎಲ್ಲವನ್ನೂ ಬಿಡಿಸಿದ್ದಾರೆ. ಈ ದಂತ ಚಿತ್ರವನ್ನು ಅವರು ಯಾರಿಗೂ ಕೊಡದೆ ತಮ್ಮ ಬಳಿಯೇ ಜೋಪಾನವಾಗಿ ಇರಿಸಿಕೊಂಡಿದ್ದರು. ಅದನ್ನು ಒಮ್ಮೆ ಅವರು ನನಗೆ ತೋರಿಸುತ್ತ ಭೂತಗನ್ನಡಿಯನ್ನೂ ಕೊಟ್ಟು 'ನೋಡಿದಿರಾ!' ಎಂದು ಹೆಮ್ಮೆಯಿಂದ ಅಂದುದು ನನಗಿನ್ನೂ ನೆನಪಿದೆ. ನನ್ನ ಕೈಯಿಂದ ಅದನ್ನು ಹಿಂದಕ್ಕೆ ತೆಗೆದುಕೊಂಡಾಗ ಅದನ್ನು ಕಣ್ಣಿಗೊತ್ತಿಕೊಂಡು ಒಳಗಿಟ್ಟರು!

ಇದು ಒಬ್ಬ ಗುರುವಿಗೆ ದಕ್ಷಿಣೆಯಾದರೆ ಶೇಷಣ್ಣನವರ ಪ್ಲಾಸ್ಟರ್ ಶಿಲ್ಪ ಇನ್ನೊಂದು ಗುರುದಕ್ಷಿಣೆ. ಜಗತ್ತಿನ ಶ್ರೇಷ್ಠ ವ್ಯಕ್ತಿಶಿಲ್ಪಗಳಲ್ಲಿ ಒಂದೆಂದು ನಿಲ್ಲಬಲ್ಲ ಕೃತಿಯಿದು. ವೈಣಿಕ ಶಿಖಾಮಣಿಯ ಪುರುಷಾಕಾರದ ಈ ಪ್ರತಿಕೃತಿ ಅವರ ಮುಖಲಕ್ಷಣವನ್ನು ಮಾತ್ರವಲ್ಲದೆ ಸ್ವಭಾವವನ್ನೂ ಹೊರತಂದಿರುವುದು ಸ್ವಾರಸ್ಯವಾಗಿದೆ. ಇದು ಸಿದ್ಧವಾದ ಕಾಲಕ್ಕೆ ಬ್ರಿಟಿಷ್ ರಾಜಕುಮಾರ ಭಾರ

ತಕ್ಕೆ ಬಂದಿದ್ದ; ಅವನು ಈ ಶಿಲ್ಪವನ್ನು ನೋಡಿ, ಅದರ ಸೊಬಗಿಗೆ ಮನಸೋತು, ಅದರ ಪ್ಲಾಸ್ಟರ್ ಪ್ರತಿ ಕೃತಿಯೊಂದನ್ನು ಮಾಡಿಸಿಕೊಂಡು ತನ್ನೊಂದಿಗೆ ಒಯ್ದ. ಅದೂ ಈಗಲೂ ಅಲ್ಲಿನ ಅರಮನೆಯಲ್ಲಿದೆಯಂತೆ. ಈ ಪ್ರತಿಮೆಯ ಭಾವಚಿತ್ರಗಳಷ್ಟೇ ನಮಗೆ ಇಂದು ಉಳಿದಿರುವುದು! ಶೇಷಣ್ಣನವರ ವಿಚಾರದಲ್ಲಿ ವೆಂಕಟಪ್ಪನ ಭಕ್ತಿ, ಆದರ ಎಷ್ಟು ಗಾಢವಾಗಿದ್ದಿತೆಂದು ಈ ಶಿಲ್ಪ ಸ್ಪಷ್ಟಪಡಿಸುತ್ತದೆ.

ಅವನೀಂದ್ರನಾಥರ ಮೂಲಕ ಪರಿಚಯವನ್ನು ಪಡೆದು ಮೆಚ್ಚಿಕೊಂಡ ವಿಶ್ವಕವಿ ರವೀಂದ್ರನಾಥರದ್ದೂ ಒಂದು ಪ್ಲಾಸ್ಟರ್ ಪ್ರತಿಮೆಯನ್ನು ವೆಂಕಟಪ್ಪ ಮಾಡಿದರು. ಅದು ಈಗ ಬೆಂಗಳೂರಿನ ರವೀಂದ್ರಕಲಾಕ್ಷೇತ್ರದ ತಲೆಬಾಗಿಲ ಮುಂದೆ ಇದೆ. ರವೀಂದ್ರನಾಥರ ವ್ಯಕ್ತಿಚಿತ್ರವನ್ನು ಪ್ರಪಂಚದ ಹಲವಾರು ಪ್ರಖ್ಯಾತಶಿಲ್ಪಿಗಳು ಮೂಡಿಸಿದ್ದಾರೆ. ಕವಿಯ ಒಂದೊಂದು ಭಾವವನ್ನು, ಒಂದೊಂದು ಭಂಗಿಯನ್ನು ಮಾತ್ರ ಈ ಶಿಲ್ಪಗಳು ಉಳಿಸಿಕೊಂಡಿವೆ. ವೆಂಕಟಪ್ಪನವರ ಶಿಲ್ಪದಲ್ಲಿಯೇ ಕವಿಯ ಸಮಗ್ರ ಚಿತ್ರಣವಿರುವುದು. ಹತ್ತಿರನೋಡಿ, ಒಡನಾಡಿ ಮಾಡಿದ ಈ ಕೃತಿಯಲ್ಲಿ ವಿಶೇಷವಾದ ಒಂದು ಕಳೆಯಿದೆ. ಕವಿಯು ನೋಡಲು ಚೆಲುವ, ಅವನ ಕಣ್ಣುಗಳಲ್ಲಿ ಏನೋ ದೂರದ ಗೀಳು, ಮುಖದಲ್ಲಿ ಅಲೌಕಿಕವಾದ ತೇಜಸ್ಸು. ಇಷ್ಟನ್ನೂ ಶಿಲ್ಪಿ ಮೂಡಿಸಿದ್ದಾರೆ. ವ್ಯಕ್ತಿ



ಯಲ್ಲಿ ಗೌರವ ಬುದ್ಧಿಯಿದ್ದರೆ ಕೃತಿ ಎಷ್ಟು ಸ್ವಾರಸ್ಯ ವಾಗಿ ಬರುವುದೆನ್ನಲು ಈ ನಿದರ್ಶನ.

ತಮ್ಮ ಎಳೆತನದಿಂದಲೂ ತಮಗೆ ನೆರವನ್ನು ನೀಡುತ್ತ, ತಮ್ಮ ಕಲಾಶಿಕ್ಷಣಕ್ಕೆ ಎಲ್ಲ ವ್ಯವಸ್ಥೆಯನ್ನೂ ಮಾಡಿ, ತಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳು ತ್ತಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ವಿಚಾರವಾಗಿ ಅವರಿಗೆ ಗೌರವ ಬುದ್ಧಿಯೊಂದಿಗೆ ಕೃತ ಜ್ಞತೆಯೂ ಇದ್ದಿತು. ಉಪಕಾರಸ್ಮರಣೆಯಿಂದ ಅವರು ಮಾಡಿರುವ ದಂತಚಿತ್ರವೊಂದು ಈ ಅರಸರನ್ನು ಕಲಾ ಪ್ರಪಂಚದಲ್ಲಿ ಉಳಿಸಿದೆ. ಇದೂ ಅವನೀಂದ್ರನಾಥರ ಚಿತ್ರದಂತೆಯೇ ಕಿರುಚಿತ್ರ, ಸಹಜವರ್ಣಗಳಲ್ಲಿಯೇ ಬಿಡಿ ಸಿದ್ದು; ಭೂತಗನ್ನಡಿಯಿಂದಲೇ ನೋಡಿದರೆ ವಿವರಗಳೆಲ್ಲ ಎದ್ದು ಕಾಣುತ್ತವೆ. ಕ್ಷೌರಮಾಡಿಕೊಂಡು ನೀಲಿಗಟ್ಟಿದ ಅರಸರ ಗಲ್ಲಗಳನ್ನೂ ಇಲ್ಲಿ ಕಾಣಬಹುದು; ಕಣ್ಣು ಗುಡ್ಡೆ ಗಳಲ್ಲಿ ಮೂಡಿಬಂದ ಪದರಗಳನ್ನೂ ಗಮನಿಸಬಹುದು. ಸ್ವಭಾವಸಿದ್ಧವಾಗಿರುವ ಕಣ್ಣಿನ ಕಾಂತಿ, ಪೇಟದ ಸುತ್ತಿ ನಲ್ಲಿ ಬಂದ ಜರತಾರಿಯ ಕುಸುರಿ ಕೆಲಸ ಎಲ್ಲವನ್ನೂ ವಿರಳವಾಗಿ ಪರಿಶೀಲಿಸಬಹುದು. ಈ ಚಿತ್ರವನ್ನು ಮುಗಿ ಸಲು ಅವರಿಗೆ ಇಡೀ ಒಂದು ವರ್ಷ ಹಿಡಿಯಿತಂತೆ!

ಅವರ ಉಪಕಾರ ಸ್ಮರಣೆ ಗುರುಗಳಿಗೆ, ಅರಸರಿಗೆ ಮಾತ್ರ ಮೀಸಲಾಗಿರಲಿಲ್ಲ. ಹೊಟೆಲ್ ಮಾಣಿಯೊಬ್ಬನ ಪ್ಲಾಸ್ಟರ್ ಪ್ರತಿಮೆಯನ್ನು ಅವರು ಮಾಡಿದ್ದಾರೆ. ನರ



ಸಿಂಹಯ್ಯನೆಂದು ಈ ಹುಡುಗನ ಹೆಸರು ; ಮಂಗಳೂರು
ಕಡೆಯುವನು. ವಿದ್ಯಾರ್ಥಿ ದಶೆಯಲ್ಲಿ ವೆಂಕಟಪ್ಪನವರು
ಮೈಮರೆತು ತಮ್ಮ ಕೆಲಸದಲ್ಲಿಯೇ ಬಹು ಹೊತ್ತು
ಕಳೆಯುತ್ತಿದ್ದರು; ಊಟದ ವೇಳೆ ಮೀರಿಹೋಗುತ್ತಿತ್ತು.
ಅವರು ಆಗ ಹೊಟೆಲ್ ಒಂದರಲ್ಲಿಯೇ ಊಟಮಾಡು
ತ್ತಿದ್ದರು. ಇವರು ಬರುವವೇಳೆಗೆ ಎಲ್ಲರ ಊಟವೂ
ಮುಗಿದು ಕಡೆಯ, ಆರಿದ, ಕಲ್ಲು ಸೇರಿದ ಅನ್ನವಷ್ಟೇ
ಇವರ ಪಾಲಿಗೆ ಉಳಿದಿರುತ್ತಿತ್ತು ! ಆದರೆ ಹೊಟಲ್‌ನ
ಪರಿಚಾರಕ ನರಸಿಂಹಯ್ಯನಿಗೆ ಇವರ ಮೇಲೆ ಏನೋ
ಅಭಿಮಾನ. ಮೊದಲೇ ಅವರಿಗೆ ಒಂದಿಷ್ಟು ಅನ್ನವನ್ನು
ತೆಗೆದಿರಿಸಿ, ಅವರು ಬಂದಾಗ ಬಿಸಿಮಾಡಿ ಬಡಿಸುತ್ತಿದ್ದ.
ಅವನ ಈ ಅಭಿಮಾನವನ್ನು, ಉಪಕಾರವನ್ನು ವೆಂಕ
ಟಪ್ಪ ಮರೆಯಲಿಲ್ಲ. ಮುಂದೆ ಯಾವುದೋ ಅಪಘಾ
ತಕ್ಕೆ ತುತ್ತಾಗಿ ಈ ಹುಡುಗ ಸತ್ತುಹೋದನಂತೆ.

ಈ ಮಾಣಿಯದು ಸೊಗಸಾದ ಶಿಲ್ಪ. ಕಪಟವರಿ
ಯದ ಎಳೆಯ ಮುಖ. ಎಷ್ಟು ನೋಡಿದರೂ ಮತ್ತೆ
ನೋಡೋಣವೆನಿಸುವಷ್ಟು ಮಾಟವಾಗಿದೆ. ಅವನೇನು
ಅರಸನೆ ? ಧನಿಕನೆ ? ಹೋಟೆಲ್‌ನಲ್ಲಿ ಊಳಿಗಕ್ಕಿರುವ
ಆಳು ಇಂಥವನಿಗೆ ಶಿಲ್ಪಿಕಲಾ ಪ್ರಪಂಚದಲ್ಲಿ ಎಷ್ಟು
ದೊಡ್ಡ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ ! ಅವರ
ಉಪಕಾರ ಸ್ಮರಣೆ ಅಂಥದು.

ಸ್ವತಂತ್ರ ಪ್ರವೃತ್ತಿ

ಇವರು ಶೇಷಣ್ಣನವರಲ್ಲಿ ವೀಣೆ ಕಲಿಯುತ್ತಿರುವಾಗಲೂ ಮಹರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು ಅರಮನೆಯ ಪರಿವಾರದಲ್ಲಿಯೇ ಸೇರಿಸಿಕೊಂಡರು. ಸರಕಾರದ ಅಧಿಕಾರಿಗಳ ಮುನಿಸು ಇದಕ್ಕೆ ಅಡ್ಡಿ ಬರುವ ಹಾಗಿರಲಿಲ್ಲ. ಅವರ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ಮಹಾರಾಜರು ಅವರಿಗೆ ಯಾವ ನಿರ್ಬಂಧವನ್ನೂ ಹಾಕದೆ, ಅವರು ಇಷ್ಟ ಬಂದಂತೆ ಕಲಾ ಸೃಷ್ಟಿ ಮಾಡಲು ಅವಕಾಶವನ್ನು ಒದಗಿಸಿಕೊಟ್ಟರು. ಹೊರಗಿನ ಪ್ರಪಂಚದ ಪರಿವೆಯೇ ಇಲ್ಲದೆ ಸಮಾಧಾನ ಚಿತ್ತರಾಗಿ, ಸ್ವತಂತ್ರರಾಗಿ ವೆಂಕಟಪ್ಪ ವರ್ಣಚಿತ್ರ, ಶಿಲ್ಪ, ವೀಣಾಭ್ಯಾಸಗಳನ್ನುಸದ್ದುಗದ್ದಲವಿಲ್ಲದೆ ನಡೆಸಿಕೊಂಡು ಬಂದರು.

ಕಲಕತ್ತಾ ಕಲಾಶಾಲೆಯಲ್ಲಿ ಇವರ ಗುರುವೂ, ಶಾಲೆಯ ಪ್ರಿನ್ಸಿಪಲನೂ ಆಗಿದ್ದ ಪರ್ಸಿ ಬ್ರೌನ್ ನಿವೃತ್ತನಾಗುವ ಸಮಯ ಬಂದಾಗ ಆತನು ವೆಂಕಟಪ್ಪನೇ ತನ್ನನಂತರ ಶಾಲೆಯ ಪ್ರಿನ್ಸಿಪಲ್ ಆಗಲು ಅರ್ಹನೆಂದು ಸರಕಾರಕ್ಕೆ ಬರೆದನು. ಬಂಗಾಳಾ ಸರಕಾರವು ಆತನ ಸಲಹೆಯನ್ನು ಮನ್ನಿಸಿ ವೆಂಕಟಪ್ಪನವರಿಗೆ ಕರೆ ಕಳುಹಿಸಿತು. ಇದು ತಿಂಗಳಿಗೆ ಸಾವಿರದ ಎಂಟುನೂರು ರೂಪಾಯಿ ಸಂಬಳದ ಕೆಲಸ; ಯಾರಾದರೂ ಬಯಸಿ ಬೇಡುವಂಥ ಉದ್ಯೋಗ. ಆದರೆ ವೆಂಕಟಪ್ಪ ಈ ಕರೆಗೆ

ಒಗೊಡಲಿಲ್ಲ. ಪರ್ಸಿ ಬ್ರೌನ್‌ಗೆ ಅವರೊಂದು ಪತ್ರ ಬರೆದು, "ನನ್ನ ಬಾಳಿನಲ್ಲಿ ಹಿರಿದಾದ ಗುರಿಯೊಂದನ್ನಿರಿಸಿ ಕೊಂಡಿದ್ದೇನೆ. ಈ ಪ್ರಿನ್ಸಿಪಲ್ ಪದವಿಯ ಮೇಲ್ವಿಚಾರಣೆ, ಪತ್ರವ್ಯವಹಾರ, ಅಧಿಕಾರಗಳು ಇದಕ್ಕೆ ಸರಿಹೋಗುವುದಿಲ್ಲ, ದಯವಿಟ್ಟು ಮನ್ನಿಸಿ. ನನ್ನ ಪಾಡಿಗೆ ನಾನು ಇರುವಂತೆ ಬಿಟ್ಟುಬಿಡಿ. ನಾನು ಕಲೆಯಲ್ಲಿ ಪರಿಣತನೆಂದು ಎಂದೂ ಅಂದುಕೊಂಡಿಲ್ಲ; ನಾನಿನ್ನೂ ಕಲಾ ವಿದ್ಯಾರ್ಥಿಯೇ. ಇಡೀ ಬಾಳನ್ನು ವಿದ್ಯಾರ್ಥಿಯಾಗಿಯೇ ಕಳೆಯಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ" ಎಂದು ತಿಳಿಸಿದರು. ಪರ್ಸಿ ಬ್ರೌನ್ ಮತ್ತೆ ಬಲವಂತ ಮಾಡಲಿಲ್ಲ.

ಹೀಗೆಯೇ ಅವರನ್ನು ಉದ್ಯೋಗದಲ್ಲಿ ಸಿಕ್ಕಿಸಲು ಹಲವಾರು ಕರೆಗಳು ಬಂದುವು ; ಯಾವುದಕ್ಕೂ ಅವರು ಒಪ್ಪಿಕೊಳ್ಳಲಿಲ್ಲ. ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಕಾತರ ಅವರಿಗಿದ್ದಿತು. ಯಾರಿಂದಲೂ 'ಅದು ಮಾಡು, ಇದು ಮಾಡು; ಹಾಗೆ ಮಾಡು, ಹೀಗೆ ಮಾಡು' ಎನಿಸಿಕೊಳ್ಳಲು ಅವರು ಸಿದ್ಧರಾಗಿರಲಿಲ್ಲ.ತಮಗೆ ತೋರಿದುದನ್ನು ತಮಗೆ ತೋಚಿದಂತೆ ಮಾಡಲು ಎಳ್ಳಷ್ಟು ಅಡ್ಡಿ ಬಂದರೂ ಅವರು ಅಲ್ಲಿಂದ ದೂರಸರಿಯುತ್ತಿದ್ದರು. ಸ್ವಾತಂತ್ರ್ಯ ಪ್ರೀತಿ ಅವರ ಜೀವನದಲ್ಲಿ ಮುಖ್ಯರಸವಾಗಿದ್ದಿತು. ಯಾರಿಗೂ ತಲೆ ಬಾಗಿಸದ, ಯಾರಿಗೂ ಮಣಿಯದ, ಯಾರ ಹಂಗಿಗೂ ಸಿಗದ ಚೇತನ ಅದು.

ಇದರಿಂದಾಗಿ ಅವರ ಸ್ವಾಭಿಮಾನದ ಪರಿಚಯ ಹಲ

ವರಿಗೆ ಕಟುವಾಗಿಯೇ ಒದಗಿರುವುದುಂಟು. ತಮಗೆ ತಪ್ಪೆಂದು ತೋರಿದುದನ್ನು ಅವರು ಹಿಂದೆ ಮುಂದೆ ನೋಡದೆ ಖಂಡಿಸಿ ಬಿಡುತ್ತಿದ್ದರು. ತಮ್ಮ ಕಲೆಯ ಮರ್ಯಾದೆಯನ್ನು ಕಾಪಾಡಿಕೊಳ್ಳುವುದು ತಮ್ಮ ಆದ್ಯ ಕರ್ತವ್ಯವೆಂದು ಅವರ ಎಣಿಕೆಯಾಗಿದ್ದಿತು. ಇದ ರಿಂದ ಅವರು ಕೆಲವಾರು ಬಾರಿ ನ್ಯಾಯಾಲಯದ ಮೆಟ್ಟಿ ಲನ್ನು ತುಳಿಯಬೇಕಾಗಿಯೂ ಬಂದಿತು. ಎರಡು ಇಂಥ ಪ್ರಸಂಗಗಳು ಮುಖ್ಯವಾದುವು.

ಒಮ್ಮೆ ಇವರು 'ಅಂಗುಲಿಪ್ರದಾನ' ಎನ್ನುವ ಸೊಗ ಸಾದ ಪ್ಲಾಸ್ಟರ್ ಶಿಲ್ಪ ಫಲಕವೊಂದನ್ನು ರಚಿಸಿದರು. ಪ್ಲಾಸ್ಟರ್ ದೊಡ್ಡ ಹಲಗೆಯ ಮೇಲೆ ಉಬ್ಬು ಚಿತ್ರದ ರೀತಿಯಲ್ಲಿ ಮಾಡಿದ ಇದರಲ್ಲಿ ರಾಮಾನುಬಂಟನಾದ ಹನು ಮಂತ ಸೀತೆಯನ್ನು ಲಂಕೆಯಲ್ಲಿ ಕಂಡು ಆಕೆಗೆ ರಾಮನ ಉಂಗುರವನ್ನು ಒಪ್ಪಿಸುತ್ತಿರುವ ಸಂದರ್ಭವಿದೆ. ಈಗ ಈ ಫಲಕ ಮೈಸೂರು ಅರಮನೆಯ ಕಲಾಸಂಗ್ರಹದಲ್ಲಿ ಸೇರಿದೆ. ಇದರ ಛಾಯಾಚಿತ್ರವನ್ನು ಬಂಗಾಳೀ ಭಾಷೆಯ 'ಉದ್ಬೋಧನ' ಎನ್ನುವ ಮಾಸಪತ್ರಿಕೆ ಪ್ರಕಟಿಸಿತು. ಚಿತ್ರ ಅಚ್ಚಾಗುವಾಗ ಸಂಪಾದಕರ ಎಚ್ಚರ ತಪ್ಪಿ ತಿರುಗು ಮುರುಗಾಗಿ ಬಿದ್ದಿತು; ಹನುಮಂತನು ತನ್ನ ಎಡಗೈ ಯಿಂದ ಸೀತೆಗೆ ಉಂಗುರವನ್ನು ಕೊಡುತ್ತಿರುವಂತೆ, ಸೀತೆ ಅದನ್ನು ತನ್ನ ಎಡಗೈಯಿಂದ ತೆಗೆದುಕೊಳ್ಳುತ್ತಿರು ವಂತೆ ಚಿತ್ರದಲ್ಲಿ ಕಾಣಿಸುತ್ತಿತ್ತು. ಎಂತಹ ಆಭಾಸ!

ಇದನ್ನು ವೆಂಕಟಪ್ಪ ಒಡನೆಯೇ ಪ್ರತಿಭಟಿಸಿದರು. ಪತ್ರಿಕೆಯ ಒಡೆಯರಿಗೆ, ಸಂಪಾದಕರಿಗೆ ಕಲೆಯ ಬಗ್ಗೆ ಇಷ್ಟು ಉದಾಸೀನವಿರುವುದೇ ಇಂಥ ಪ್ರಮಾದಕ್ಕೆ ಕಾರಣವೆಂದು ಅವರಿಗೆ ಅನಿಸಿತು. ಈ ಚಿತ್ರವನ್ನು ನೋಡಿದವರು ತಮ್ಮ ವಿಚಾರ ಏನೆಂದುಕೊಂಡಾರು ಎನ್ನುವ ಆಲೋಚನೆಯೂ ಬಂದಿತು; ಕಲಾವಿದನಿಗೆ ಸಭ್ಯತೆ, ಸಂಪ್ರದಾಯಗಳು ತಿಳಿಯದೆಂದು ರಸಿಕರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲವೆ? ಹನುಮಂತನಂಥ ವಿನಯಶೀಲ, ಭಕ್ತ ಸೀತಾದೇವಿಗೆ ಎಡಗೈ ಮುಂದೆ ಮಾಡಿ ಏನನ್ನಾದರೂ ಕೊಡಬಹುದೆ? ಶ್ರೀರಾಮನ ಉಂಗುರವನ್ನು ಸೀತಾದೇವಿ ಎಡಗೈಯಿಂದ ಸ್ವೀಕರಿಸಿಯಾಳೆ? ವೆಂಕಟಪ್ಪನವರಿಗೆ ತುಂಬ ಕಿರಿಕಿರಿಯಾಯಿತು.

ಪತ್ರಿಕಾಕರ್ತರು ಇವರ ಪ್ರತಿಭಟನೆಯನ್ನು ಗಮನಕ್ಕೆ ತಂದುಕೊಳ್ಳಲೇ ಇಲ್ಲ; ತಮ್ಮ ತಪ್ಪನ್ನು ತಿದ್ದಿಕೊಳ್ಳಲೂ ಇಲ್ಲ. ಕಡೆಗೆ ವೆಂಕಟಪ್ಪ ನ್ಯಾಯಾಲಯದಲ್ಲಿ ತಕರಾರು ಹೂಡಬೇಕಾಯಿತು. ನ್ಯಾಯ ಅವರಂತೆಯೇ ಆಯಿತು. ತಕರಾರಿನ ವೆಚ್ಚವನ್ನು, ಎಂದರೆ ೨೫೦೦ ರೂಪಾಯಿಗಳನ್ನು, 'ಉದ್ಬೋಧನ' ಪತ್ರಿಕೆ ವೆಂಕಟಪ್ಪನವರಿಗೆ ಕಟ್ಟಿಕೊಡತಕ್ಕದ್ದೆಂದು ನ್ಯಾಯಾಲಯ ತೀರ್ಮಾನಮಾಡಿತು. ಆದರೆ ವೆಂಕಟಪ್ಪನವರಿಗೆ ಬೇಕಾಗಿದ್ದುದು ನ್ಯಾಯವಷ್ಟೆ; ಪತ್ರಿಕೆಯಿಂದ ಏನು ಹಣವನ್ನೂ ತೆಗೆದುಕೊಳ್ಳಲು ಅವರು ಒಪ್ಪಲಿಲ್ಲ, ಒಂದು

ಬಿಡಿಗಾಸನ್ನೂ ಅವರ ಮುಟ್ಟಲಿಲ್ಲ. ಪತ್ರಿಕೆ ಮಾಡಿದ್ದು ತಪ್ಪು ಎಂದು ಸಾರ್ವಜನಿಕರಿಗೆ ತಿಳಿಯಿತು, ಅಷ್ಟು ಸಾಕೆಂದು ವೆಂಕಟಪ್ಪ ಸಮಾಧಾನಗೊಂಡರು.

ಇದೇ ರೀತಿ ಮತ್ತೊಮ್ಮೆ ಅವರು ನ್ಯಾಯಾಲಯದಲ್ಲಿ ತಕರಾರು ಹೂಡಬೇಕಾಯಿತು. ಆಗ ಮೈಸೂರು ಸಂಸ್ಥಾನ ಇನ್ನೂ ಒಡೆಯರ ಆಳ್ವಿಕೆಯಲ್ಲಿದ್ದಿತು. ನಾಲ್ವಡಿ ಕೃಷ್ಣರಾಜ ಒಡೆಯರು ವೆಂಕಟಪ್ಪನಿಗೆ ಸುಮಾರು ೪೦,೦೦೦ ರೂಪಾಯಿಗಳಷ್ಟು ಬೆಲೆ ಬಾಳುವ ಕೆಲವು ಶಿಲ್ಪ ಫಲಕಗಳನ್ನು ನಿರ್ಮಿಸಲು ಅಪ್ಪಣೆಮಾಡಿದರು. ಆದರೆ ಕೃತಿಗಳು ಮುಗಿಯುವಷ್ಟರಲ್ಲಿ ಆ ಮಹಾರಾಜರು ತೀರಿಕೊಂಡರು. ಅರಮನೆಯ ಅಪ್ಪಣೆಯೆಂದು ವೆಂಕಟಪ್ಪ ಎಲ್ಲ ಶಿಲ್ಪ ಫಲಕಗಳನ್ನೂ ಮುಗಿಸಿ ಅಧಿಕಾರಿಗಳಿಗೆ ಒಪ್ಪಿಸಿದರು. ಅವರಾದರೋ ಇವನ್ನು ಕೊಳ್ಳದೆ ತಿರಸ್ಕರಿಸಿಬಿಟ್ಟರು ; ಹಿಂದಿನ ಮಹಾರಾಜರ ಕಾಲದಲ್ಲಿ ಮಾಡಿದ ಅಪ್ಪಣೆಗೆ ಮನ್ನಣೆ ದೊರೆಯಲಿಲ್ಲ. ವೆಂಕಟಪ್ಪನ ಕಲಾಕೃತಿಗಳಿಗೆ ತಿರಸ್ಕಾರವಾದುದು ಮಾತ್ರವಲ್ಲ, ಅವರು ಮೆಚ್ಚಿಕೊಂಡಿದ್ದ ಕೃಷ್ಣರಾಜ ಒಡೆಯರಿಗೂ ಅಪಮಾನ ಮಾಡಿದಂತಲ್ಲವೆ ?

ವೆಂಕಟಪ್ಪ ಸಿಟ್ಟಿಗೆದ್ದರು. ಅರಮನೆಯ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರು. ಸ್ವಾತಂತ್ರ್ಯ ಬರುವ ಮೊದಲು ಈ ಧೈರ್ಯ ಯಾರಿಗೂ ಇರಲಿಲ್ಲ. ಮಹಾರಾಜರು ಸರ್ವಸ್ವತಂತ್ರರಾಗಿದ್ದರು ;

ಅರಮನೆಯು ವ್ಯವಹಾರಗಳು ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡುವಂತಿರಲಿಲ್ಲ. ಆದರೂ ಕೆಚ್ಚೆದೆಯ ವೆಂಕಟಪ್ಪ ಅರಮನೆಯನ್ನು ನ್ಯಾಯಾಲಯಕ್ಕೆಳೆದರು. ನ್ಯಾಯಾಲಯವೇನೋ ಅವರ ಅರ್ಜಿಯನ್ನು ತಳ್ಳಿಹಾಕಿ, ಅರಮನೆಯ ನೀತಿಯನ್ನು ತಾನು ಪ್ರಶ್ನಿಸುವ ಹಾಗಿಲ್ಲವೆಂದು ಹೇಳಿಬಿಟ್ಟಿತು. ಇಷ್ಟಾದರೂ ಮಹಾರಾಜರು ಈ ತಕರಾರಿನಲ್ಲಿ ವೆಂಕಟಪ್ಪನಿಗೆ ತಗುಲಿದ್ದ ವೆಚ್ಚವನ್ನು ಕಟ್ಟಿಕೊಡಲು ಮುಂದೆ ಬಂದರು ; ಈ ಹಣ ಸುಮಾರು ಐದುಸಾವಿರ ರೂಪಾಯಿಗಳಷ್ಟು ಆಗುತ್ತಿತ್ತು. ಮಾತಿಗೆ ತಪ್ಪಿ ನಡೆದುಕೊಂಡ ಅರಮನೆಯನ್ನು ಬೀದಿಗೆಳೆದುದೇ ಸಾಕೆಂದೂ, ತಕರಾರಿನ ವೆಚ್ಚ ತನಗೇ ಇರಲೆಂದೂ ವೆಂಕಟಪ್ಪ ಮಹಾರಾಜರ ನೀಡಿಕೆಯನ್ನು ನಿರ್ಲಕ್ಷಿಸಿದರು. ವೆಂಕಟಪ್ಪನ ಕಡೆ ವಕೀಲರಾಗಿದ್ದ ವಿ.ವಿ. ಶ್ರೀನಿವಾಸ ಅಯ್ಯಂಗಾರ್ಯರು, ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಮತ್ತು ಸರಕಾರದ ವಕೀಲರಾಗಿದ್ದ ಮಿರ್ಲೆ ಲಕ್ಷ್ಮೀನಾರಾಯಣರಾಯರು ಇವರ ಮೂಲಕ ಮಹಾರಾಜರು ವೆಂಕಟಪ್ಪನವರ ಮೇಲೆ ಒತ್ತಾಯ ತರಲೆತ್ನಿಸಿದರು. ವೆಂಕಟಪ್ಪನೇನು ಜಗ್ಗಲಿಲ್ಲ ; ಒಂದು ಬಿಡಿಕಾಸನ್ನೂ ಮುಟ್ಟಲಿಲ್ಲ.

ಬೆಂಗಳೂರು ವಾಸ

ಆದರೆ ಈ ಪ್ರಸಂಗದಿಂದ ಅವರಿಗೆ ಬೇಸರವಾಯಿತು. ಮೈಸೂರಿನ ಕಡೆ ತಲೆಯನ್ನಿಟ್ಟು ಮಲಗು

ವುದೂ ಇಲ್ಲವೆಂದು ನಿರ್ಧರಿಸಿ ಆಗಲೇ ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದುಬಿಟ್ಟರು. ಇದು ನಡೆದುದು ೧೯೪೬ರ ಜುಲೈ ತಿಂಗಳಲ್ಲಿ. ಮುಂದೆ ಸುಮಾರು ಇಪ್ಪತ್ತು ವರ್ಷಗಳು ಅ ವ ರು ಬೆಂಗಳೂರಿನಲ್ಲಿಯೇ ಇದ್ದರೂ, ಒಂದು ಬಾರಿಯೂ ಮೈಸೂರಿಗೆ ಹೋಗ ಲಿಲ್ಲ! ಅಂಥ ಕಠೋರ ವ್ರತ ಅವರದ್ದು.

ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿ ವಿಶಾಲ ವಾದ ಜಾಗವೊಂದನ್ನು ಕೊಂಡು ಅಲ್ಲಿ ಗಾಳಿ ಬೆಳಕು ಚೆನ್ನಾಗಿ ಬರುವ,ಸರಳ, ಸುಂದರವಾದ ಮನೆಯೊಂದನ್ನು ಕಟ್ಟಿಸಿಕೊಂಡರು. ಮೇಲೆ ಒಂದೆರಡು ಮಹಡಿಗಳನ್ನು ಕಟ್ಟಿಸಿ ಅಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಂಗೀತಗಳನ್ನು ಉಚಿತವಾಗಿ ಕಲಿಸುವ ಶಾಲೆಯೊಂದನ್ನು ತೆರೆಯ ಬೇಕೆಂದು ಮನಸ್ಸುಮಾಡಿ ಸರ್ವಾಂಗೀಣವಾದ 'ಪ್ಲಾನ್' ಒಂದನ್ನು ತಯಾರಿಸಿದರು. ಹಣ ತೆಗೆದುಕೊಂಡು ಕಲೆ ಯನ್ನು ಕಲಿಸುವುದು ಅವರಿಗೆ ಹಿಡಿಸುತ್ತಿರಲಿಲ್ಲ; ಕಲೆ ಯಲ್ಲಿ ಇಂಥ ವ್ಯವಹಾರ ಬರಬಾರದೆಂದು ಅವರ ಎಣಿಕೆ. ಮನಸ್ಸಿದ್ದವರಿಗೆ ಧಾರಾಳವಾಗಿ ತಾವೇ ಪಾಠ ಹೇಳಿ ಕೊಡಲು ನಿಶ್ಚಯಿಸಿದರು. ತಮ್ಮ ಕಲಾಕೃತಿಗಳನ್ನು ಓರಣವಾಗಿ ಅಳವಡಿಸಿ 'ಸಂಗ್ರಹಾಲಯ'ವೊಂದನ್ನೂ ಏರ್ಪಡಿಸಿದರು.

ಆದರೆ ಇದಕ್ಕೆ ಜನರ ಯಾವ ನೆರವೂ ದೊರೆಯದೆ ಅವರ ಯೋಜನೆಯೆಲ್ಲ ಹಾಗೆಯೇ ಕರಗಿಹೋಯಿತು;

ಪ್ಲಾನ್‌ನ್ನು ಸುರುಳಿಸುತ್ತಿ ದಾರಕಟ್ಟಿ ತಮ್ಮ ಕೋಣೆಯ ಗೂಡಿನಲ್ಲಿಟ್ಟು ಬಾಗಿಲು ಮುಚ್ಚಿ ಕೈಮುಗಿದರು ! ನನಗೊಮ್ಮೆ ಅವರು ಈ ಪ್ಲಾನನ್ನು ತೆಗೆದು, ತೋರಿಸಿ, ವಿವರಿಸಿ ಮತ್ತೆ ಗೂಡಿಗೆ ಸೇರಿಸಿದರು. ಆಗ ನನಗೆನಿಸಿತು- "ಇವರ ಯೋಜನೆ ಕೈಗೂಡದಿದ್ದರೆ ಇವರಿಗೇನು ನಷ್ಟವಿಲ್ಲ; ಆದರೆ ಇಂಥ ಮಹಾಪುರುಷನ ಶಿಕ್ಷಣ ಪಡೆಯಲಾರದ ಜನ ಎಂಥವರು ! ಬಿಡಿಗಾಸನ್ನೂ ಮುಟ್ಟುವುದಿಲ್ಲವೆಂದು ಮುಂದೆ ಬಂದರೂ ಅವರ ಕರೆಗೆ ಓಗೊಡದೆ ಇದ್ದೇವಲ್ಲ !" ಎಂದು.

ಇವರ ಕಲಾಕೃತಿಗಳನ್ನು ನೋಡಲು ಬರುತ್ತಿದ್ದವರಾದರೂ ಎಂಥವರು ಬಲ್ಲಿರಾ ? ಕಲೆಯಲ್ಲಿ ಆಸಕ್ತರಾದವರು, ಕಲೆಯನ್ನು ಅಭ್ಯಾಸ ಮಾಡುವವರು ಅಲ್ಲ; ತಮಾಷೆಗೆಂದು ಬರುವವರೇ ಹೆಚ್ಚು. ಸಂಜೆ ಕೆಲಸವಿಲ್ಲದೆ, ಬಿಡುವಾಗಿದ್ದಾಗ, ಏನು ಮಾಡಬೇಕೆಂದು ತಿಳಿಯದೆ, ~~ಲಾಲ್‌ಬಾಗ್ ತುಂಬ ದೂರವೆಂದುಕೊಂಡು~~, ವೆಂಕಟಪ್ಪನವರ ಮನೆಗೆ ಬರುತ್ತಿದ್ದರು. ~~ತುಂಟ ಹುಡುಗರು, ಸೋಮಾರಿ ಧಾಂಡಿಗರು, ಪುಂಡಪೋಕರಿಗಳು ಇವರೇ ಬರುತ್ತಿದ್ದವರು.~~ ಕಾಲೇಜ್ ವಿದ್ಯಾರ್ಥಿಗಳು ಕೆಲವರು ಬರುತ್ತಿದ್ದರೆನ್ನಿ; ಆದರೆ ಇವರೂ ಗೌರವದಿಂದ ನಡೆದುಕೊಳ್ಳುತ್ತಿರಲಿಲ್ಲ. ~~ಒಬ್ಬ~~ ಇವರ ಸಂಗ್ರಹಾಲಯದಲ್ಲಿ ಆಡ್ತಾಡುತ್ತ, ಗೋಡೆಗೆ ಆನಿಸಿಟ್ಟಿದ್ದ ಬೋಧಿಸತ್ತ್ವನ ಲೋಹಫಲಕವೊಂದರ ಮೇಲೆ ಕಾಲಿಟ್ಟು, ತುಳಿದು

ನಾಲ್ಕು ಚೂರು ಮಾಡಿಬಿಟ್ಟ. ವೆಂಕಟಪ್ಪ ಇದನ್ನು ಹಾಗೆಯೇ ಇರಿಸಿ, ಅದು ಚೂರಾದ ಕಥೆಯನ್ನು ಹೇಳುವ ಬರಹವನ್ನೂ ಪಕ್ಕದಲ್ಲಿರಿಸಿ, ಬಂದವರಿಗೆಲ್ಲ ತೋರಿಸುತ್ತಿದ್ದರು !

ತಾವು ಕಷ್ಟಪಟ್ಟು ತಯಾರಿಸಿದ ಉತ್ತಮ ಕಲಾಕೃತಿಯೊಂದು ಹಾಳಾಯಿತೆನ್ನುವ ಬೇಸರಕ್ಕಿಂತ, ಸುಸಂಸ್ಕೃತರೆನಿಸಿಕೊಳ್ಳುವ ಜನ ಹೀಗೆ ನಡೆದುಕೊಳ್ಳುತ್ತಾರಲ್ಲ ಎಂಬ ಬೇಸರ ಹೆಚ್ಚಾಯಿತು. ತಮ್ಮ ಸಂಪರ್ಕ, ತಮ್ಮ ಕಲಾಕೃತಿಗಳ ಪ್ರದರ್ಶನ ಜನರಿಗೆ ಸುಲಭವಾಗಿ, ಉಚಿತವಾಗಿ ದೊರೆಯುತ್ತಿದ್ದುದರಿಂದ ಜನರಿಗಾಗಲೀ ತಮಗಾಗಲೀ ಯಾವ ಪ್ರಯೋಜನವೂ ಇರದೆಂದು ಅವರಿಗೆ ತೋರಿತು. ಆದರಿಂದ ತಮ್ಮ ಸಾಧನೆಗೇ ಅಡ್ಡಿಯೆಂದು ಭಾವಿಸಿ, ಜನರಿಗೆ ಬೇಡವಾದ ಕೆಲಸಕ್ಕೆ ಕೈ ಹಾಕುವುದು ಸಲ್ಲದೆಂದು ನಿಶ್ಚಯಿಸಿದರು. ತಮ್ಮ ಮನೆಯ ಬಾಗಿಲನ್ನು ಮುಚ್ಚಿಕೊಂಡರು; ನಾನು ಮೊದಲಲ್ಲೇ ತಿಳಿಸಿರುವ ಬರಹವನ್ನು ಮನೆಯ ಮುಂದಿರಿಸಿದರು. ಹೊರಜಗತ್ತಿಗೂ ತಮಗೂ ಇದ್ದ ನಂಟನ್ನು ಕಡಿದುಕೊಂಡರು.

ಆದರೆ ಕಲಾಭಿರುಚಿಯಿದ್ದವರಿಗೆ, ಉತ್ಸುಕರಾದವರಿಗೆ ಅವರೇನು ದುರ್ಲಭರಾಗಿರಲಿಲ್ಲ. 'ದಿಟವಾಗಿ ಆಸಕ್ತಿಯಿದ್ದವರು ಕದ ತಟ್ಟಿ ಒಳಗೆ ಬರುತ್ತಾರೆ' ಎಂದು ಅವರ ವಾದ. ಹಾಗೆ ಬಯಸಿ ಬಂದವರನ್ನು ಅವರು

ಸ್ವಾಗತಿಸಿ, ಅವರಿಗೆ ತಮ್ಮ ಕೃತಿಗಳನ್ನೆಲ್ಲ ತೋರಿಸಿ ವಿವರಿಸುತ್ತಿದ್ದರು. ಜಾಗ ಸಾಲದೆ ತಮ್ಮ ವರ್ಣಚಿತ್ರಗಳನ್ನೂ ತೈಲಚಿತ್ರಗಳನ್ನೂ ಕಟ್ಟಿಟ್ಟಿದ್ದರು. ನಾವು ಬರುವ ಸೂಚನೆಯನ್ನು ಮೊದಲೇ ಕೊಟ್ಟಿದ್ದರೆ ಅವನ್ನೆಲ್ಲ ಹೊರತೆಗೆದು ಓರಣವಾಗಿ ಜೋಡಿಸಿಟ್ಟಿರುತ್ತಿದ್ದರು.

ಅವರು ಮನೆಯನ್ನು ಕಟ್ಟಿಸಿಕೊಂಡ ಬಗೆಯೇ ಅವರ ಕಲಾನೈಪುಣ್ಯವನ್ನು ಎತ್ತಿ ತೋರಿಸುತ್ತಿತ್ತು. ಅಂಗಳ, ಹಜಾರ, ಸಂಗೀತ ಸಭಾಮಂಟಪ, ವಾದ್ಯಗೃಹ, ಮಲಗುವ ಕೋಣೆ, ಕೂಡುವ ಕೋಣೆ ಮೊದಲಾದ ಭಾಗಗಳನ್ನೆಲ್ಲ ನಾಜೂಕಾಗಿ, ಅಚ್ಚುಕಟ್ಟಾಗಿ ಕಟ್ಟಿಸಿದ್ದಾರೆ. ಮಲಗುವ ಕೋಣೆಯಲ್ಲಿಯೇ ಅವರ ದೊಡ್ಡ ವೀಣೆಯನ್ನು ಇರಿಸಿಕೊಳ್ಳುತ್ತಿದ್ದರು. ಶಿಲ್ಪಫಲಕಗಳನ್ನಿಟ್ಟಿದ್ದ ಕೋಣೆಗೆ ಉತ್ತರದಿಕ್ಕಿನಿಂದ ಬೆಳಕು ಬರುವಂತೆ ಕಿಟಕಿಯನ್ನು ಅಳವಡಿಸಿದ್ದರು.

ಒಂಟಿ ಜೀವ

ವೆಂಕಟಪ್ಪ ಬಾಳಿನುದ್ದಕ್ಕೂ ಒಂಟಿಯಾಗಿಯೇ ಉಳಿದರು. ಮದುವೆ ಮಾಡಿಕೊಳ್ಳಲಿಲ್ಲ, ನೆಂಟರೊಂದಿಗೆ ಬೆರೆಯಲಿಲ್ಲ, ಮಿತ್ರರೆಂದು ಯಾರನ್ನು ಮೇಲೇರಿಸಿಕೊಳ್ಳಲಿಲ್ಲ. ಕಲೆಯೇ ಅವರ ಪಾಲಿಗೆ ಮಡದಿಯೆನ್ನುವುದನ್ನು ಗುರು ಅವನೀಂದ್ರನಾಥರೇ ಗಮನಿಸಿದ್ದರಷ್ಟೆ. ಅವರು ಬಾಳಿದ ಬಗೆಗೆ ಆಜೀವಬ್ರಹ್ಮಚರ್ಯ ಎನ್ನು

ತ್ತಾರೆ. ೧೯೧೩ರಲ್ಲಿ ಅವರು ಕಲಕತ್ತಾ ಕಲಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಹಿಮಾಲಯದ ಪರಿಸರ ದಲ್ಲಿ ಪಂಚಕೇದಾರ ಯಾತ್ರೆಯನ್ನು ಕೈಗೊಂಡಿದ್ದರು ; ಈ ವಿಚಾರ ಮೊದಲೇ ಬಂದಿತು. ಯಾವುದಾದರೂ ತೀರ್ಥಕ್ಷೇತ್ರಕ್ಕೆ ಹೋದಾಗ ತಮಗೆ ಅಗತ್ಯವಾದ, ಬೇಕೆ ನಿಸಿದ ಯಾವುದಾದರೂ ಪದಾರ್ಥವನ್ನು ಬಿಟ್ಟುಬಿಡುವ ವಾಡಿಕೆಯಿದೆಯಲ್ಲವೆ ? ಕೆಲವರು ಕಾಶೀಯಾತ್ರೆ, ಗಯಾಯಾತ್ರೆ, ಬದರೀಯಾತ್ರೆ ಮೊದಲಾದುವನ್ನು ಮಾಡಿ ತಮಗೆ ರುಚಿಯೆನಿಸಿದ ಕಾಯಿಪಲ್ಲೆಗಳನ್ನೂ, ಧಾನ್ಯಗಳನ್ನೂ, ಹಣ್ಣುಹಂಪಲುಗಳನ್ನೂ ಬಿಟ್ಟುಬಿಡು ತ್ತಾರೆ ; ಎಂದರೆ ಮುಂದೆ ಅವನ್ನು ಸೇವಿಸುವುದಿಲ್ಲ, ತಿನ್ನುವುದಿಲ್ಲ, ತೆಗೆದುಕೊಳ್ಳುವುದಿಲ್ಲ. ಹೀಗೆಯೇ ವೆಂಕಟಪ್ಪ ಪಂಚಕೇದಾರಯಾತ್ರೆಯನ್ನು ಮಾಡಿದಾಗ ಅಪರಿಗ್ರಹವ್ರತವನ್ನು ತೊಟ್ಟರು.

ಅಪರಿಗ್ರಹವೆಂದರೆ ತೆಗೆದುಕೊಳ್ಳದಿರುವುದು. ತನ್ನ ದಲ್ಲದ, ತನಗೆ ಸೇರದಿದ್ದ, ಸೇರಬಾರದ ಯಾವ ವಸ್ತು ವನ್ನೂ ಯಾರಿಂದಲೂ ಯಾವ ಸಂದರ್ಭದಲ್ಲಿಯೂ ತಾನು ಸ್ವೀಕರಿಸುವುದಿಲ್ಲ ಎಂದು ಆಗ ಅವರು ನಿರ್ಧ ರಿಸಿದರು ; ಇದೇ ವ್ರತ. ಅಂದಿನಿಂದ ತಮ್ಮ ಕಡೆಯುಸಿ ರನ್ನು ಎಳೆಯುವವರೆಗೂ ಈ ವ್ರತವನ್ನು ಪಾಲಿಸಿ ಕೊಂಡು ಬಂದರು. ಹಲವರಿಗೆ ಇದರಿಂದ ಬೇಸರವಾ ಯಿತು, ತಮಗೇ ಕಷ್ಟವಾಯಿತು ; ಆದರೂ ಈ ವ್ರತ

ವನ್ನೇನು ಅವರು ಸಡಿಲಿಸಲಿಲ್ಲ. ಯಾರೊಬ್ಬರಿಂದಲೂ ಯಾವುದೇ ಸ್ಥಿತಿಯಲ್ಲಿಯೂ ಯಾವ ಬಗೆಯ ನೆರವನ್ನೂ ಅವರು ಪಡೆದುಕೊಳ್ಳುತ್ತಿರಲಿಲ್ಲ. ಯಾರ ಹಂಗೂ ತನಗೆ ಇರಬಾರದೆನ್ನುವ ಹಟ ಅವರಿಗಿದ್ದಿತು.

ಏಕಾಂಗಿಯಾಗಿ, ಸ್ವತಂತ್ರರಾಗಿ ಬಾಳಿದ ಅವರು ಕಡೆಗಾಲದ ಒಂದೆರಡು ವರ್ಷ ಕಾಯಿಲೆಯಿಂದ ಹಾಸಿಗೆ ಹಿಡಿದು ಸ್ವಲ್ಪಮಟ್ಟಿಗೆ ಪರಾವಲಂಬಿಗಳಾಗಬೇಕಾಯಿತು. ಅವರ ಮನೆಯ ಬಳಿಯೇ ಇದ್ದ ಅವರ ಅಕ್ಕ, ಅಕ್ಕನ ಮಗ ಇವರಿಂದ ಮನೆಗೆಲಸವನ್ನೂ, ತಮ್ಮ ಆರೋಗ್ಯಕ್ಕೆ ಅಗತ್ಯವಾದ ಉಪಚಾರವನ್ನು ಮಾಡಿಸಿಕೊಂಡರು ; ಆದರೆ ಅದಕ್ಕೆ ಪ್ರತಿಫಲವನ್ನು ಸಲ್ಲಿಸಿಯೇ ತೀರಿಕೊಂಡರು ! ಇದಕ್ಕೆ ಮೊದಲಂತೂ ತಮ್ಮ ಅಡುಗೆಯನ್ನು ತಾವೇ ಮಾಡಿಕೊಂಡು, ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಂಡು, ತಮಗೆ ಬೇಕಾದ ಸಾಮಾನನ್ನು ತಾವೇ ತಂದುಕೊಂಡು, ತಮ್ಮೆಲ್ಲ ಕೆಲಸಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು. ಅಗತ್ಯ ಬಿದ್ದಾಗ ಮಾತ್ರ ಹಣ ಕೊಟ್ಟು ಕೆಲಸಮಾಡಿಸಿಕೊಳ್ಳುವರು.

ಅವರೊಂದಿಗೆ ಸಂಜೆಯ ವೇಳೆ ಅಡ್ಡಾಡಲು ಹೋದಾಗ ಅವರು 'ಕಾಫಿ ಕುಡಿಯೋಣ, ಬನ್ನಿ' ಎಂದು ಹೋಟಲಿಗೆ ಕರೆದೊಯ್ಯುತ್ತಿದ್ದುದುಂಟು. ಕಾಫಿ ಕುಡಿದ ಮೇಲೆ ಹಣವನ್ನು ನಾನು ಕೊಟ್ಟರೆ, ತಾವು ಕುಡಿದ ಕಾಫಿಯ ಬೆಲೆಯಷ್ಟು ಹಣವನ್ನು ನನ್ನ

ಮುಂದಿಡುತ್ತಿದ್ದರು. ನಾನು ಅದನ್ನು ತೆಗೆದುಕೊಳ್ಳ ದಿದ್ದರೆ ಬಿಡರು. ಮನೆಗೆ ಬಂದಾಗ ಕಾಫಿ ಕೊಟ್ಟರೆ "ನೀರು ಕೊಡಿ, ಚಿಂತೆಯಿಲ್ಲ. ಆದರೆ ಕಾಫಿ ನಾನು ಕುಡಿ ದರೆ ನನ್ನಿಂದ ನೀವು ಹಣವನ್ನು ತೆಗೆದುಕೊಳ್ಳಬೇಕು!" ಎನ್ನುವರು. ಇದು ಯಾರಿಗಾದರೂ ವಿಚಿತ್ರವೆನಿಸೀತು. ಆದರೆ ವ್ರತವನ್ನು ಹಿಡಿದವರು ಸಣ್ಣದೆಂದು ಏನನ್ನೂ ಅಸಡ್ಡೆ ಮಾಡುವಹಾಗಿಲ್ಲ ; ಅವರಿಗೆ ಯಾವುದೂ ಸಣ್ಣ ದಲ್ಲ !

ಅವರು ಯಾವ ಕೆಲಸವನ್ನು ಮಾಡಿದರೂ ನಯ, ನಾಜೂಕು, ಶ್ರದ್ಧೆ. ಆತುರಕ್ಕೆ ಅವರು ಎಂದೂ ಏನನ್ನೂ ಮಾಡುವವರಲ್ಲ; ಎಲ್ಲವೂ ಸಾವಕಾಶವಾಗಿ, ಅಚ್ಚು ಕಟ್ಟಾಗಿ ನಡೆಯಬೇಕು. ಧೂಳು ಝಾಡಿಸಲಿ, ಕಸ ಕೊಡವಲಿ, ಅಡುಗೆಗೆ ಅಕ್ಕಿ ಆರಿಸಿಕೊಳ್ಳಲಿ, ಎಲ್ಲವೂ ಕಲಾಕೃತಿಯಂತೆಯೇ ನಡೆಯುವುದು. ವರ್ಣಚಿತ್ರ ವನ್ನು ಬರೆಯುವಾಗ ಎಷ್ಟು ಶ್ರದ್ಧೆಯೋ ಬಟ್ಟೆ ಒಗೆ ಯುವಾಗಲೂ ಅಷ್ಟೇ ಶ್ರದ್ಧೆ, ಕಾಗದ ಬರೆಯು ವಾಗಲೂ ಅದೇ ನಿಷ್ಠೆ. ಹಾಗೆಂದೇ ಅವರಿದ್ದ ಮನೆ ಯಲ್ಲಿ ಎಲ್ಲಿಯೂ ಧೂಳಿನ ಕಣವನ್ನೂ ಕಾಣುವಂತಿರ ಲಿಲ್ಲ ; ಉಟ್ಟ ಬಟ್ಟೆಯಲ್ಲಿ ಕೊಳೆಯ ಕಲೆಯೂ ಇರುವ ಹಾಗಿಲ್ಲ. ಕಾಗದ ಪತ್ರಗಳನ್ನು ಜೋಡಿಸುವಾಗ ವರ್ಣ ಚಿತ್ರಗಳನ್ನು ಜೋಡಿಸುವಷ್ಟೇ ಓರಣ. ಎಲ್ಲೆಲ್ಲಿ ಏನೇನು ಇರಬೇಕು ಅದು ಅಲ್ಲಿಯೇ ಇರಬೇಕು ; ಬೇರೆ ಕಡೆ ಅಗತ್ಯ

ಕ್ಕಿಂತ ಹೆಚ್ಚುಕಾಲ ಇರುವ ಹಾಗಿಲ್ಲ. ನನಗೆ ಏನಾದರೂ ಪುಸ್ತಕವನ್ನೋ ಪತ್ರವನ್ನೋ ತೋರಿಸುವಾಗ ಕೋಣೆಯೊಳಗೆ ಹೋಗಿ ಕಪಾಟನಿಂದ ಅದನ್ನು ತರುವರು ; ತೋರಿಸಿದ ಮರುಕ್ಷಣವೇ ಅದನ್ನೊಯ್ದು ಅದರ ಜಾಗಕ್ಕೆ ಸೇರಿಸುವರು-ಅದು ಮೇಜಿನಮೇಲೆ ಬಿದ್ದಿರುವಹಾಗಿಲ್ಲ !

ಒಂಟಿಯಾಗಿ ಅವರು ಬದುಕುತ್ತಿದ್ದರೂ ಬದುಕಿನ ಬಗ್ಗೆ ಅವರು ತಳೆದಿದ್ದ ವಿಶ್ವಾಸ ಗಾಢವಾದುದು. ಅವರಿಗೆ ಒಂದು ಗಳಿಗೆಯಾದರೂ ಬೇಸರ, ಆಲಸಿಕೆ ಎನ್ನುವುದರ ಅರಿವಾಗುತ್ತಿರಲಿಲ್ಲ. ಕಾಲ ಚಕ್ರ ಉರುಳುತ್ತಿರುವ ಒಂದೊಂದು ಕ್ಷಣವೂ ಅವರಿಗೆ ಗೊತ್ತಾದ ಕೆಲಸವಿರುತ್ತಿತ್ತು ; ದಿನದ ವೇಳೆಯನ್ನು ಅಷ್ಟು ಕರಾರುವಾಕ್ಕಾಗಿ ಅಳವಡಿಸಿಕೊಂಡಿದ್ದರು. 'ಹೊತ್ತೇ ಹೋಗುವುದಿಲ್ಲ' ಎಂದು ನಾವು ಅನ್ನುವಂತೆ ಅವರು ಎಂದೂ ಅಂದದ್ದಿಲ್ಲ. ಕಾಲವನ್ನು ಪೋಲು ಮಾಡದಿರುವ ಕಲೆಯೂ ಅವರ ಕೈವಶವಾಗಿದ್ದಿತು.

ಕಲೆಗೇ ಅವರ ಹೃದಯ, ಮನಸ್ಸು, ಶಕ್ತಿ, ಕಾಲ ಎಲ್ಲವೂ ಮೀಸಲಾಗಿದ್ದುವು. ಆದುದರಿಂದಲೇ ಅವರು ಒಂಟಿಯಾಗಿದ್ದುದು. ಬೇರೆಯವರಿಗೆ ತನ್ನಿಂದ ಬವಣೆಯಾಗಬಾರದು ಎನ್ನುವ ಹಟದಂತೆಯೇ ಬೇರೆಯವರಿಂದ ತಮಗೆ ಬವಣೆಯಾಗಬಾರದು ಎನ್ನುವ ಹಟವೂ ಅವರಲ್ಲಿದ್ದಿತು ; ಇದರಿಂದಾಗಿ ಕೆಲವೊಮ್ಮೆ ಅವರು ಕಟುವಾಗಿ, ಕಂಡಿತವಾಗಿ ನಡೆದುಕೊಳ್ಳುತ್ತಿದ್ದುದೂ

ಉಂಟು. ಇದನ್ನು ಕಂಡವರು ಅವರ ಬಳಿ ಹೋಗಲು ಹೆದರುತ್ತಿದ್ದರು ; ವೆಂಕಟಪ್ಪನೆಂದರೆ ಬೆಂಕಿ ನವಾಬ, ಸಿಂಹ ಎಂದು ಅವರ ಎಣಿಕೆ. ಅಲಸಿಕೆಯನ್ನು, ಅನಾದರವನ್ನು, ಅಪ್ರಾಮಾಣಿಕತೆಯನ್ನು ಅವರು ಸಹಿಸುತ್ತಿರಲಿಲ್ಲ, ನಿಜ ; ಒಳಗೆ ಕುದಿಯುತ್ತ, ಮೇಲೆ ನಗುವ ಸ್ವಭಾವ ಅವರದ್ದಲ್ಲ. ಆದರೆ ಅವರದ್ದು ತುಂಬ ಸಾಧು ಪ್ರವೃತ್ತಿ ; ನಯ, ವಿನಯಗಳು ಅವರಿಗೆ ಒಂಟ ಬಂದಿದ್ದ ಗುಣಗಳು. ಯಾರೊಡನೆಯೂ ಹಗೆತನ ಸಾಧಿಸುವವರಲ್ಲ ಅವರು ; ಕಪಟಗಳನ್ನು ಹತ್ತಿರ ಸೇರಿಸುವವರೂ ಅಲ್ಲ. ಅವರದ್ದು ತೆರೆದ ಹೃದಯ ; ಮುಚ್ಚುಮರೆಯನ್ನೇ ಅವರು ಕಾಣರು.

ಶಿಕ್ಷಣದ ಕಷ್ಟ

ವೆಂಕಟಪ್ಪನಂಥ ಹಿರಿಯ ಕಲಾವಿದರು ತಮ್ಮ ಕಲೆಯನ್ನು ಯಾರಿಗೂ ಕಲಿಸಲಿಲ್ಲವೆಂದು ಅಂದುಕೊಳ್ಳುವವರಿದ್ದಾರೆ; ಅವರು ಸ್ವಾರ್ಥಿಯೆಂದು ಮೂದಲಿಸುವವರೂ ಕೆಲವರಿದ್ದಾರೆ. ಆದರೆ ಅವರಿಗೆ ನಿಜವಾದ ವಿವರ ತಿಳಿಯದು. ಅವರು ಬೆಂಗಳೂರಿಗೆ ಬಂದುದೇ ಕಲಾಶಾಲೆಯನ್ನು ತೆರೆಯಲು ; ಅದಕ್ಕಾಗಿ, ಬಂದ ಐದಾರು ವರ್ಷಗಳು ಹಲವಾರು ಬಗೆಗಳಲ್ಲಿ ಪ್ರಯತ್ನವನ್ನೂ ಮಾಡಿದರು. ಏನು ಮಾಡಿದರೂ ಚೆನ್ನಾಗಿ, ಚೊಕ್ಕವಾಗಿ, ಪರಿಷ್ಕಾರವಾಗಿ ಮಾಡಬೇಕೆನ್ನುವ

ನಿಯಮ ಅವರಿಗಿದ್ದಿದ್ದಾಗಿ ಸ್ವಲ್ಪ ತೊಂದರೆಯಾಯಿತು. 'ಏನೋ, ಶಾಲೆ ತೆರೆದರಾಯಿತು, ಮುಂದೆ ನೋಡಿಕೊಳ್ಳೋಣ' ಎನ್ನುವ ಮನೋಧರ್ಮ ಅವರಿಗಿರಲಿಲ್ಲ. ಆರಂಭದಲ್ಲಿಯೇ ಅನಾದರವಾದರೆ ಮುಂದುವರಿಯುವುದು ಹೇಗೆ? 'ಸರಿಯಾಗಿ ಶುರು ಮಾಡಿದರೆ ಮಾಡಿ, ಇಲ್ಲದಿದ್ದರೆ ಬೇಡವೇ ಬೇಡ. ನಿಮ್ಮ ಪ್ರಯತ್ನವಿಲ್ಲದಿದ್ದರೆ ಪ್ರಪಂಚವೇನು ಮುಳುಗಿಹೋಗುವುದಿಲ್ಲ!' ಎನ್ನುವರು ಅವರು. ಈ ನಿಲುವಿನಿಂದ ಕಲಾಶಾಲೆ ತೆರೆಯುವ ಯೋಜನೆಯನ್ನು ಕೈಬಿಟ್ಟರು.

ಕಲೆಯನ್ನು ಕಲಿಯಲು ಬಂದವರನ್ನು ಮಾತ್ರ ಅವರು ಎಂದೂ ಹಿಂದಕ್ಕೆ ಕಳುಹಿಸಿದವರಲ್ಲ. ತಾವಾಗಿ ಮೇಲೆಬಿದ್ದು ಯಾರಿಗೂ ಕಲಿಸಲು ಎಲ್ಲಿಗೂ ಹೋಗುತ್ತಿರಲಿಲ್ಲ; ಆದರೆ ತಮ್ಮ ಬಳಿಗೆ ವಿದ್ಯಾರ್ಥಿಯಾಗಿ ಬಂದವರಿಗೆ ಆದರದಿಂದ, ಉತ್ಸಾಹದಿಂದ, ನಿಸ್ಸಂಕೋಚವಾಗಿ ಕಲಿಸುತ್ತಿದ್ದರು. ಎಂದ ಮೇಲೆ, ಬಹುಮಂದಿ ವಿದ್ಯಾರ್ಥಿಗಳು ಏಕೆ ಬರಲಿಲ್ಲ? ಎಂದು ನೀವು ಕೇಳಬಹುದು. ಅದಕ್ಕೆ ಕಾರಣ ಅವರ ಶಿಕ್ಷಣ ವಿಧಾನ. ತಮ್ಮ ಬಳಿ ಬಂದವರು, ಮೊದಲು ಎಷ್ಟೇ ಕಲಿತಿರಲಿ ಎಷ್ಟೇ ಸಮರ್ಥರಿರಲಿ, ಸರಳಗೆರೆ ಎಳೆಯುವುದರಿಂದಲೇ ಆರಂಭಿಸಬೇಕು. ದೊಡ್ಡವರಿಗೂ ಎಳೆಯ ಹುಡುಗರಂತೆಯೇ ಮೊದಲ ಪಾಠಗಳು! 'ಅಷ್ಟು ಬುನಾದಿ; ನಾನು ಅದನ್ನು ಗಟ್ಟಿ ಮಾಡಿಕೊಂಡೇ ಮುಂದೆ ಸಾಗುವುದು. ನೀವು ಬೇಸರ

ಪಟ್ಟರೆ ನಿಮಗೇ ನಷ್ಟ! ಅದು ಬಾಲಪಾಠವೆಂದು ನಿಮಗೆ ಅನ್ನಿಸಿದರೆ ನನ್ನ ಬಳಿ ಬರಬೇಡಿ! ಬೆಂಗಳೂರಿನಲ್ಲಿ ಕಲಾಶಿಕ್ಷಕರಿಗೇನು ಕೊರತೆಯಿಲ್ಲ! ನಿಮಗೆ ಬೇಕಾದ ಗುರು ಸಿಕ್ಕೇ ಸಿಗುತ್ತಾನೆ' ಎಂದು ನಿರ್ದಾಕ್ಷಿಣ್ಯವಾಗಿ ಮುಗಿಸಿ ಬಿಡುವರು. ಕಲೆಯಲ್ಲಿ ಸುಮಾರಾಗಿ ಕೈಪಳಗಿ ದವರು ಬಂದು 'ನನಗೆ ಇಷ್ಟು ಬಂದಾಗಿದೆ, ಮುಂದಕ್ಕೆ ಕಲಿಸಬೇಕು' ಎಂದರೆ 'ನಿಮಗೆಷ್ಟು ಬಂದಿದೆ ಎನ್ನುವು ದರ ಗೊಡವೆ ನನಗೇಕೆ? ನಾನು ಯಾರಿಗಾದರೂ ಕಲಿ ಸುವುದು ಮೊದಲಿಂದಲೇ!' ಎನ್ನುವರು.

ಇನ್ನೂ ಒಂದು ಅವರ ಹಟ. ಕಲೆಯನ್ನು ಕಲಿ ಯುವವರು ಕಲೆಯನ್ನು ಮಾತ್ರ ಕಲಿಯಬೇಕು; ಅವರಿಗೆ ಇನ್ನೇನಾದರೂ ಚಟವಿದ್ದರೆ ಅವರು ವೆಂಕಟಪ್ಪ ನವರಿಂದ ದೂರವೇ. ಅದೂ ಇದೂ ಹವ್ಯಾಸಗಳನ್ನಿರಿಸಿ ಕೊಂಡು, ಜೀವನೋಪಾಯಕ್ಕೆ ದಾರಿಗಳನ್ನು ಹುಡು ಕುತ್ತ ಇರುವವರಿಗೆ ಕಲೆಯನ್ನು ಅವರು ಕಲಿಸುತ್ತಿರ ಲಿಲ್ಲ. ತಾವೆಂದುಕೊಂಡಂತೆ 'ಕಲೆಯೇ ನನ್ನ ಸರ್ವಸ್ವ' ಎಂದು ಬಗೆದು ಬಂದವರ ಮೇಲೆ ಮಾತ್ರ ಅವರ ಒಲುವು. ಕಲೆಗಾಗಿ ತಾವು ಕಷ್ಟಪಟ್ಟಂತೆ ಕಷ್ಟಪಡಲು ಸಿದ್ಧವಾಗಿರಬೇಕು ತಮ್ಮ ವಿದ್ಯಾರ್ಥಿ; ತಮ್ಮ ಸಾಧನೆ ಯಂತೆಯೇ ಅವನ ಸಾಧನೆ ಎಡೆಬಿಡದೆ ನಡೆಯಬೇಕು. ಪಾಲುಮಾರುವ ವಿದ್ಯಾರ್ಥಿ ಕಲೆಯನ್ನು ಕಲಿತರೂ ಅದು ಊರ್ಜಿತವಾಗುವುದಿಲ್ಲ. ಹಣದ ಆಸೆಗೆ ಕಲಿಸು

ವವರು ಇದ್ದಾರೆ ; ಆದರೆ ವೆಂಕಟಪ್ಪ ತಾವು ಕಲಿಸಿದ್ದಕ್ಕೆ ಪ್ರತಿಫಲವಾಗಿ ವಿದ್ಯಾರ್ಥಿಯಿಂದ ಒಂದು ಕುರುಡು ಕವಡೆಯನ್ನೂ ತೆಗೆದುಕೊಳ್ಳುವವರಲ್ಲವಷ್ಟೆ. ಕಲಿಯು ವವರ ಕಲಿಸುವವರ ನಡುವೆ ಹಣದ ನೆಂಟು ಇರಬಾರ ದೆಂದು ಅವರ ಆಗ್ರಹ ; ಕಲಾಸಕ್ತಿಯೊಂದು ಮಾತ್ರ ಗಾಢವಾಗಿ ಇಬ್ಬರನ್ನೂ ಸೆಳೆಯಬೇಕಷ್ಟೆ. ಅವರ ದೃಷ್ಟಿ ಯಲ್ಲಿ ಕಲೆಯ ಅಭ್ಯಾಸ ಒಂದು ತಪಸ್ಸು ಮಾಡಿದಂತೆ.

ಈ ಶ್ರದ್ಧೆ, ಇಷ್ಟು ನಿಷ್ಠೆ, ಇಂತಹ ತವಕ ಇರುವ ವಿದ್ಯಾರ್ಥಿಗಳು ಎಷ್ಟುಮಂದಿ ಇರುತ್ತಾರೆ ? ಕಲೆಗಾಗಿ ಅವರಂತೆ ಬಾಳನ್ನು ಮುಡಿಪಿಡುವವರು ಯಾರು ? ಅವರು ಪಟ್ಟಷ್ಟು ಕಷ್ಟವನ್ನು ಪಡುವವರು ಯಾರು ? ಅವರ 'ಅಸುರಸಾಧನೆ' ಎಷ್ಟುಮಂದಿಗೆ ಸಾಧ್ಯ ? ಅವರ ಸ್ವಭಾವವನ್ನೂ, ಅವರ ಶಿಕ್ಷಣದ ಕಾಠಿನ್ಯವನ್ನೂ ಅರಿತು ಅವರ ಬಳಿ ಕಲಿಯಲು ಬಂದ ವಿದ್ಯಾರ್ಥಿಗಳೇ ವಿರಳ ; ಬಂದವರೂ ಹೆಚ್ಚುಕಾಲ ಉಳಿಯಲಾರದೆ ಕಳಚಿ ಕೊಂಡರು ! ಅವರ ನೀತಿನಿಯಮಗಳನ್ನೆಲ್ಲ ಅನುಸರಿಸಿ, ಅವರ ಮೆಚ್ಚುಗೆಯನ್ನು ಪಡೆದು ಅವರಲ್ಲಿ ಕಲಾಭ್ಯಾಸ ವನ್ನು ಮಾಡಿದ ವಿದ್ಯಾರ್ಥಿಯೆಂದರೆ ರಾಮಮೋಹನ ಶಾಸ್ತ್ರಿಯೊಬ್ಬನೇ.

ಆಂಧ್ರ ಜಾತೀಯ ಕಲಾಶಾಲೆಯವರು

~~ಆಗಿನ ಮದರಾಸು ಸರಕಾರದವರು~~ ಈತನನ್ನು ವೆಂಕಟಪ್ಪನವರಲ್ಲಿ ಕಲಿಯಲು ಕಳುಹಿಸಿದ್ದರು. ಇಲ್ಲಿಗೆ ಬರುವ ಮೊದಲು ~~ಆತ ಆಂಧ್ರ ಜಾತೀಯ ಕಲಾಶಾಲೆ~~

ಯಲ್ಲಿ ವಿದ್ಯಾರ್ಥಿಯಾಗಿದ್ದ ; ತೆಲುಗುದೇಶದಲ್ಲಿ ಜನ ಪ್ರೀತಿಯನ್ನು ಆಗಲೇ ಗಳಿಸಿದ್ದ ಕಲಾವಿದ. ಸರಕಾರ ಅವನಿಗೆ ಎರಡು ವರ್ಷ ವೇತನವನ್ನು ಕೊಟ್ಟು ಉಚ್ಚ ಶಿಕ್ಷಣಕ್ಕೆಂದು ವೆಂಕಟಪ್ಪನ ಬಳಿ ಬಿಟ್ಟದ್ದಿತು. ಶಾಸ್ತ್ರಿಯು ಕಲಾಭ್ಯಾಸದಲ್ಲಿ ತೋರಿಸಿದ ನಿಷ್ಠೆಯನ್ನೂ, ಸಹನೆಯನ್ನೂ, ತವಕವನ್ನೂ ನೋಡಿ ವೆಂಕಟಪ್ಪ ಸಂತೋಷಗೊಂಡು ಆತನಿಗೆ ತಮ್ಮ ಕಲಾ ನೈಪುಣ್ಯವನ್ನೆಲ್ಲ ಧಾರೆಯೆರೆದರು. ಮುಂದೆ ಆತ ಬಿರ್ಲಾ ಶ್ರೀಮಂತರ ಮನೆಯ ಮಕ್ಕಳಿಗೆ ಕಲಾಚಾರ್ಯನಾಗಿ ಕೆಲಸಮಾಡುತ್ತ ತನ್ನ ಕಲಾಭ್ಯಾಸವನ್ನು ಮುಂದುವರಿಸಿಕೊಂಡು ಹೋದ. ವೆಂಕಟಪ್ಪನವರ ಕಲಾಶೈಲಿ ಆತನಿಂದ ಉಳಿಯಬಹುದಾಗಿತ್ತು. ಆದರೆ ನಾಡಿನ ದುರ್ದೈವದಿಂದ ಆತ ತನ್ನ ಮಧ್ಯವಯಸ್ಸಿನಲ್ಲೇ ಕ್ಷಯರೋಗಕ್ಕೆ ತುತ್ತಾಗಿ ತೀರಿಕೊಂಡ! ಅಲ್ಲಿಗೆ ವೆಂಕಟಪ್ಪನವರ ಕಲಾ ಪರಂಪರೆ ಮುಗಿಯಿತು.

ಕಲಾಕೃತಿಗಳು

ವೆಂಕಟಪ್ಪನವರ ಕಲಾಕೃತಿಗಳಲ್ಲಿ ನಿಸರ್ಗದ ಜಲವರ್ಣಚಿತ್ರಗಳು, ವ್ಯಕ್ತಿಚಿತ್ರಣದ ಶಿಲ್ಪಗಳು, ಪ್ಲಾಸ್ಟರ್ ಶಿಲ್ಪಫಲಕಗಳು.ದಂತದ ಹಲಗೆಗಳ ಮೇಲೆ ವ್ಯಕ್ತಿಚಿತ್ರಣ ಇವು ಮುಖ್ಯವಾದುವು. ದಂತದ ತುಂಡುಗಳ ಮೇಲೆ ಅವರು ಬಿಡಿಸಿದ ಗುರು ಅವನೀಂದ್ರನಾಥ ಠಾಕುರರ

ಮತ್ತು ಮಹಾರಾಜ ಕೃಷ್ಣರಾಜ ಒಡೆಯರ ಚಿತ್ರಗಳ
ಬಗ್ಗೆ ಪ್ರಸ್ತಾಪ ಆಗಲೇ ಬಂದಿದೆ. ಕೃಷ್ಣರಾಜ ಒಡೆಯರ
ಕೋರಿಕೆಯಂತೆ ಬರೋಡ ಸಂಸ್ಥಾನದ ಮಹಾರಾಜರ
ಚಿತ್ರವನ್ನೂ ಹೀಗೆಯೇ ಬಿಡಿಸಿದ್ದರು ; ಆದರೆ ಮಹಾ
ರಾಣಿಯ ವ್ಯವಹಾರದಿಂದ ಬೇಸತ್ತು ಅವರಿಗೆ ಅದನ್ನು
ಕೊಡಲಿಲ್ಲ! ವೀಣೆ ಶೇಷಣ್ಣನವರ ಮತ್ತು ಮಾಣಿ ನರ
ಸಿಂಹಯ್ಯನ ಶಿಲ್ಪಗಳ ವಿಚಾರವೂ ಆಗಲೇ ಬಂದಿತು.

ಅವರ ಜಲವರ್ಣಚಿತ್ರಗಳಲ್ಲಿ ಹೆಸರಾದುವೆಂದರೆ
ನೀಲಗಿರಿ ಬೆಟ್ಟಸಾಲಿನ ರಮಣೀಯ ದೃಶ್ಯಗಳು. ಉದಕ
ಮಂಡಲ (ಊಟಿ), ಕೂನೂರುಗಳಲ್ಲಿ ಕೆಲವು ಕಾಲ ನೆಲೆಸಿ,
ಮುಂಜಾನೆ, ಸಂಜೆ ತಿರುಗಾಡಿ ತಮಗೆ ಸುಂದರವೆಂದು
ತೋರಿದ ದೃಶ್ಯಗಳನ್ನು ವರ್ಣಚಿತ್ರಗಳಲ್ಲಿ ಮೂಡಿಸಿಟ್ಟಿ
ದ್ದಾರೆ. ಪ್ರಕೃತಿ ಚಿತ್ರಣದ ಸೊಬಗನ್ನು ನೋಡಬೇ
ಕೆಂದರೆ ಈ ಕೃತಿಗಳನ್ನು ಪರಿಶೀಲಿಸಬೇಕು. ಅವರದ್ದು
ಸೂಕ್ಷ್ಮವಾದ ಕುಂಚದ ಕೆಲಸ. ಒಂದು ಚಿತ್ರದಲ್ಲಿ
ಮನೆಯ ಹೆಂಚುಗಳನ್ನು ಒಂದೊಂದನ್ನೂ ಎಣಿಸ
ಬಹುದು ; ಇನ್ನೊಂದರಲ್ಲಿ ರಸ್ತೆಯಲ್ಲಿನ ಕಲ್ಲು ಹರಳು
ಗಳು ಒಂದೊಂದನ್ನೂ ಗುರುತಿಸಬಹುದು! ಮತ್ತೊಂದ
ರಲ್ಲಿ ಮರದ ಎಲೆಗಳನ್ನು ಬೇರೆ ಬೇರೆ ಕಾಣಬಹುದು.
ತುಂಬ ತಾಳ್ಮೆಯಿಂದ, ಯಾವ ಗಡಿಬಿಡಿಯೂ ಇಲ್ಲದೆ,
ಆಕೃತಿಗಳನ್ನೂ ವರ್ಣಗಳನ್ನೂ ಎಚ್ಚರದಿಂದ ಅರಿತು
ಕೊಂಡು ನಯವಾಗಿ ಬಿಡಿಸುವುದು ಅವರ ಪದ್ಧತಿ.

ಹಲವಾರು ವರ್ಷಗಳ ಪ್ರಯೋಗದಿಂದ ಅರಗಿಸಿ ಕೊಂಡ ಕಲಾ ಸಂವಿಧಾನ ಪ್ಲಾಸ್ಟರ್ ಶಿಲ್ಪ ಫಲಕಗಳು. ದೊಡ್ಡ ದೊಡ್ಡ ಪ್ಲಾಸ್ಟರ್ ಆಫ್ ಪ್ಯಾರಿಸ್ ಬಿಳಿಯ ಹಲಗೆಗಳನ್ನು ಅಚ್ಚುಹಾಕಿಸಿ ಅದರಲ್ಲಿ ಉಬ್ಬು ಚಿತ್ರ (ರಿಲೀಫ್)ಗಳನ್ನು ಬಿಡಿಸುವುದು ಅವರ ವೈಶಿಷ್ಟ್ಯ. ಇಡೀ ಫಲಕ ಸರ್ವಶ್ವೇತ ; ಅಲ್ಲಿ ಬೇರೆ ಬೇರೆ ಬಣ್ಣಗಳ ವಿನ್ಯಾಸ ವಿಲ್ಲ. ಚಿತ್ರ ಉಬ್ಬಿರುವುದು ಎರಡಂಗುಲಕ್ಕೂ ಕಡಮೆ. ಚಿತ್ರದ ವಿವರಗಳನ್ನೆಲ್ಲ ಇಷ್ಟರಲ್ಲೇ ಕಡೆಯಬೇಕು. ಇದಕ್ಕೆ ವಿಶೇಷವಾದ ಜಾಣತನ ಬೇಕೆಂದು ಬೇರೆ ಹೇಳ ಬೇಕೆ ?

ಈ ಶಿಲ್ಪಫಲಕಗಳಲ್ಲಿ ಸಿದ್ಧಾರ್ಥನ ರಾಜ್ಯಪರಿತ್ಯಾಗದ ಸಂದರ್ಭವನ್ನು ತೋರಿಸುವುದೊಂದಿದೆ. ವೃತ್ತಾಕಾರದ ಈ ಫಲಕವನ್ನು ಮೊಟ್ಟಮೊದಲು ಕಡೆದದ್ದು ೧೯೨೫ ರಲ್ಲಿ ; ೧೯೫೧-೧೯೫೨ರಲ್ಲಿ ಮತ್ತೆ ಇದರ ಮೇಲೆ ಕೈಯಾ ಡಿಸಿದರು. ಮುಂದೆ ಬುದ್ಧನಾಗಲಿರುವ ಸಿದ್ಧಾರ್ಥನ ಧೀರಗಂಭೀರ ಮುಖಮುದ್ರೆಯಲ್ಲಿ ದೃಢ ವಿರಕ್ತಿ ಮೂಡಿಬಂದಿದೆ ; ಅವನು ಬಿಟ್ಟು ಹೋಗಲಿರುವ ಕುದುರೆಯ ಮೋರೆಯಲ್ಲಿ ದುಗುಡ ತುಂಬಿ ಬಂದಿದೆ. ಮೊದಲು ಕಡೆದಾಗ ರಾಜಕುಮಾರನ ಒಡವೆಗಳೂ ಕುದುರೆಯ ಅಲಂಕರಣಗಳೂ ಎದ್ದು ಕಾಣುತ್ತಿದ್ದು ವಂತೆ ; ಆದರೆ ಈಗಿರುವ ಫಲಕದಲ್ಲಿ ಭಾವಗಳು ಮುಖ್ಯ ವಾಗಿವೆ. 'ಆಭರಣಗಳಿಂದ ಮನುಷ್ಯ ರಾಜನಾಗುವನೆ ?

ನಾಟಕರಂಗದ ಮೇಲೆ ಕೀಳು ಮನುಷ್ಯನೂ ರಾಜನಂತೆ ವೇಷ ತಳೆಯಬಹುದು ; ಪ್ರಯೋಜನವೇನು ? ವೇಷ ವನ್ನು ಕಟ್ಟಿಕೊಂಡು ಮಾಡುವುದೇನು ? ರಾಜನ ಗಾಂಭೀರ್ಯ, ಧೀರೋದಾತ್ತ ಗುಣಗಳು ಚಿತ್ರಣದಲ್ಲಿ ಬರಬೇಕು. ಸ್ವಭಾವ ಮುಖ್ಯ ; ಅಲಂಕರಣ ಗೌಣ. ಮೊದಲ ಫಲಕಕ್ಕೂ ಈಗಿನ ಫಲಕಕ್ಕೂ ಇದೇ ವ್ಯತ್ಯಾಸ ಮೊದಲ ಫಲಕದಲ್ಲಿ ಸಿದ್ಧಾರ್ಥ ಬರಿಯ ರಾಜಪುತ್ರ ; ಕುದುರೆ ಬರಿಯ ನಾಲ್ಕು ಕಾಲಿನ ಪ್ರಾಣಿ. ಆದರೆ ಈಗ

ಸಿದ್ಧಾರ್ಥ ಮುಂದೆ ಬುದ್ಧನಾಗ ಬಲ್ಲ ವಿರಕ್ತ; ಅವನ ಕುದುರೆ ಅವನನ್ನು ಬಿಡಲಾರದೆ ಪರಿತಪಿಸುತ್ತಿರುವ ಭಾವುಕ ಪ್ರಾಣಿ' ಎಂದು ವೆಂಕಟಪ್ಪನವರ ವಿವರಣೆ.

ಶಿವತಾಂಡವವನ್ನು ತೋರಿಸುವ ಇನ್ನೊಂದು ದೊಡ್ಡ ಫಲಕವನ್ನೂ ಇವರು ಬಿಡಿಸಿದ್ದಾರೆ. ಹೆಚ್ಚೂ ಕಡಿಮೆ ಮನುಷ್ಯ ಪ್ರಮಾಣದಲ್ಲಿಯೇ ಇರುವ ನಟರಾಜನ ಭಂಗಿ ಅಪೂರ್ವವಾಗಿದೆ. ಪ್ಲಾಸ್ಟರ್ ಹಲಗೆಯ ಮೇಲೆ ಒಂದು ಮತ್ತು ಎಂಟನೇ ಒಂದು ಅಂಗುಲವಷ್ಟೇ ಉಬ್ಬಿರುವ ಈ ಶಿಲ್ಪದಲ್ಲಿ ಶಿವನ ಮುಖದ ಮೇಲೆ ಮೂಡಿರುವ ತೇಜಸ್ಸು, ಆನಂದ, ಸೌಂದರ್ಯ ಇವನ್ನು ಬಾಯಿಮಾತಿನಿಂದ ವಿವರಿಸುವುದಾಗದು. ನೋಡುತ್ತ ನಿಂತರೆ ಶಿವನು ದಿಟವಾಗಿ ನಮ್ಮ ಮುಂದೆ ಕುಣಿಯ ತೊಡಗಿದ್ದಾನೆ ಎಂದೇ ಭಾಸವಾಗುತ್ತದೆ.

ದ್ರೋಣಾಚಾರ್ಯರು ಕೌರವ-ಪಾಂಡವರಿಬ್ಬರಿಗೂ ಬಿಲ್ಲಿನ ಕಲೆಯನ್ನು ಹೇಳಿಕೊಟ್ಟ ಗುರುಗಳಲ್ಲವೆ? ಅವರನ್ನು ಕುರಿತ ಪ್ಲಾಸ್ಟರ್ ಫಲಕವೊಂದಿದೆ. ದ್ರೋಣರದ್ದು ಮುದಿಮೈಯಾದರೂ ಗಾಂಭೀರ್ಯ ಉಕ್ಕುತ್ತಿದೆ; ದೂರದಲ್ಲಿ ಗುರಿಯನ್ನು ಕೈಬೆರಳಿನಿಂದ ತೋರಿಸುತ್ತಿದ್ದಾರೆ. ಪಕ್ಕದಲ್ಲಿ ಅವರ ನೆಚ್ಚಿನ ಶಿಷ್ಯನಾದ ಅರ್ಜುನ ಗುರಿಯಲ್ಲಿಯೇ ತನ್ಮಯನಾಗಿ ಬಿಲ್ಲಿಗೆ ಹೆದೆಯೇರಿಸಿದ್ದಾನೆ; ಅವನ ಪಕ್ಕದಲ್ಲಿ ಭೀಮಸೇನ. ನಾನು ಇದನ್ನು ಮೊದಲಬಾರಿ ನೋಡಿದಾಗ ವೆಂಕಟಪ್ಪ "ಭೀಮ

ನಿಗೆ ಧನುರ್ವಿದ್ಯೆಯೆಂದರೆ ಅಷ್ಟಕ್ಕಷ್ಟೇ; ತಾತ್ಸಾರ. ಅವನ ಒಲುವೆಲ್ಲ ಗದೆಯ ಮೇಲೇ. ಇದನ್ನು ಇಲ್ಲಿ ಕಾಣಬಹುದು" ಎಂದು ನನ್ನ ಗಮನವನ್ನು ಸೆಳೆದರು. ದಾಯಾದಿಗಳಾದ ಕೌರವರಿಗೆ ಮುಖ್ಯಗುಣ ಮತ್ಸರ ವಲ್ಲವೆ? ಫಲಕದಲ್ಲಿ ಭೀಮಾರ್ಜುನರಿಗೆ ಎದುರಾಗಿ ನಿಂತ ಕೌರವರಲ್ಲಿ ಇದನ್ನು ಚೆನ್ನಾಗಿ ಕಾಣಬಹುದು. ಸ್ವಭಾವ ಗಳನ್ನೂ ಭಾವಗಳನ್ನೂ ಎಷ್ಟು ಚೆನ್ನಾಗಿ ಬಯಲು ಮಾಡಿದ್ದಾರೆ!

ಏಕಲವ್ಯನೂ ಮಹಾಭಾರತದ ಹೆಸರಾಂತ ಬಿಲ್ಲಾಳು. ಬೇಡಜಾತಿಗೆ ಸೇರಿದ ಇವನನ್ನು ಕ್ಷತ್ರಿಯ ನಾದ ಅರ್ಜುನ ಹೀನಾಯವಾಗಿ ಕಂಡರೂ, ಗುರುಗಳಾದ ದ್ರೋಣಾಚಾರ್ಯರು ಇವನ ಸಾಧನೆಗೆ ಮೆಚ್ಚಿಕೊಂಡಿ ದ್ದರು. ದ್ರೋಣಾಚಾರ್ಯರ ಗೊಂಬೆಯನ್ನುಮಣ್ಣಿನಲ್ಲಿ ಮಾಡಿಟ್ಟುಕೊಂಡು, ಅದರ ಸನ್ನಿಧಿಯಲ್ಲಿ ಭಕ್ತಿಯಿಂದ, ಶ್ರದ್ಧೆಯಿಂದ ಅವನು ಧನುರ್ವಿದ್ಯಾಭ್ಯಾಸ ಮಾಡಿ ಅರ್ಜುನನಿಗಿಂತಲೂ ಹೆಚ್ಚಿನ ಕೈಚಳಕವನ್ನು ಪಡೆದಿದ್ದ. ಈ ಸಂದರ್ಭವನ್ನು ವೆಂಕಟಪ್ಪ ಫಲಕವೊಂದರಲ್ಲಿ ಸೆರೆ ಹಿಡಿದಿಟ್ಟಿದ್ದಾರೆ. ಬೇಡನಾದ ಏಕಲವ್ಯನಿಗೆ ಮೇಲುಬ್ಬಿದ ಮೂಗು, ಬಲವಾದ ಮೈಕಟ್ಟು; ಏರಿಸಿದ ಬಿಲ್ಲಿನಲ್ಲೇ ನೆಟ್ಟ ದೃಷ್ಟಿ. ಪಕ್ಕದಲ್ಲಿ ಅವನ ಆರಾಧ್ಯಮೂರ್ತಿಯಾದ ದ್ರೋಣಾಚಾರ್ಯರ ಪ್ರತಿಕೃತಿ. ಬೇಡನಾದವನು ಮಾಡಿದರೆ ಮೂರ್ತಿ ಹೇಗಿರುತ್ತದೆ? ಈ ಮೂರ್ತಿ

ಯನ್ನು ನೋಡಿದರೆ ಮಾರಮ್ಮನ ನೆನಪು ಬರುತ್ತದೆ! ಪಾಪ, ಏಕಲವ್ಯನೇನು ವೆಂಕಟಪ್ಪನವರಂತೆ ರಸಿಕನೇ? ಕಲಾವಿದನೇ? ಸಾಧನೆಗೆಷ್ಟುಬೇಕೋ ಅಷ್ಟು ಮಾಡಿಟ್ಟು ಕೊಂಡಿದ್ದಾನೆ. ದ್ರೋಣಾಚಾರ್ಯರನ್ನು ನಾನು ಮಾಡ ಲಿಲ್ಲ; ಅದು ಏಕಲವ್ಯ ಮಾಡಿದ್ದು" ಎಂದರು ವೆಂಕಟಪ್ಪ ನಗುತ್ತ! ಈ ಮೂರ್ತಿಯ ಮುಂದೆ ತನಗೆ ಪ್ರಿಯ ವಾದ ಮದ್ಯ, ಮಾಂಸಗಳನ್ನು ಏಕಲವ್ಯ ನಿವೇದಿಸಿ ದ್ದಾನೆ. "ದ್ರೋಣಾಚಾರ್ಯರಿಗೆ ಅವು ಸೇರದಿದ್ದರೆ ಅದು ಏಕಲವ್ಯನ ತಪ್ಪೆ? ತನಗೆ ಬೇಕಾದುದನ್ನು ಕೊಡು ತ್ತಾನೆ, ಅಷ್ಟೆ." ಹಿಂದೆ ಮರಗಳ ಸಾಲು, ಅದಕ್ಕೂ ಹಿಂದೆ ದೂರದಲ್ಲಿ ಬೆಟ್ಟ, ಬೆಟ್ಟದಲ್ಲಿ ಕೊರಕಲುಗಳು, ತಪ್ಪಲು. ಎಲ್ಲವನ್ನೂ ನಾಜೂಕಾಗಿ, ಸ್ಪಷ್ಟವಾಗಿ ಬಿಡಿ ಸಿದ್ದಾರೆ. ಶಿಲ್ಪ ಉಬ್ಬಿರುವುದು ಎರಡಂಗುಲಕ್ಕೂ ಕಡಮೆ ಎನ್ನುವುದನ್ನು ಮರೆಯಬೇಡಿ.

ಇನ್ನೊಂದು ಫಲಕ ಶಕುಂತಲೆ ತಾನು ಬೆಳೆದ ಕಣ್ವಾಶ್ರಮದಿಂದ ಹೊರಡುತ್ತಿರುವ ದೃಶ್ಯ. ಇದನ್ನು ಮೊದಲಬಾರಿ ನನಗೆ ಅವರು ತೋರಿಸಿದಾಗ ಫಕ್ಕನೆ ಉಸಿರಾಟವೇ ಒಂದರಗಳಿಗೆ ನಿಂತಿತು! ಅಷ್ಟು ಅದ್ಭುತ ವಾದ ಕಲಾಕೃತಿಯನ್ನು ಹಿಂದೆಂದೂ ಕಂಡುದಿಲ್ಲ. ಪಶ್ಚಿಮ ದಿಕ್ಕಿಗೆ ಮುಖಮಾಡಿ ನಿಂತ ಆ ಫಲಕವನ್ನು ಕೊಂಚಕಾಲ ನೋಡಿದ ಮೇಲೆ ವೆಂಕಟಪ್ಪ ಇಳಿವಯ ಸ್ಸಿನವರಾದರೂ ಭಾರವಾದ ಆ ದೊಡ್ಡ ಫಲಕವನ್ನು

ತಾವೊಬ್ಬರೇ ಪಶ್ಚಿಮಾಭಿಮುಖವಾಗಿ ತಿರುಗಿಸಿಟ್ಟು "ಈಗ ನೋಡಿ! ಅದೇ ಬೇರೆ, ಇದೇ ಬೇರೆ!" ಎಂದರು. ಒಂದೊಂದು ದಿಕ್ಕಿನಿಂದ ಬೆಳಕು ಬಿದ್ದಾಗ ಒಂದೇ ಶಿಲ್ಪ ಎಷ್ಟು ಬೇರೆ ಬೇರೆಯಾಗಿ ಕಾಣುತ್ತದೆ! ನೆರಳು-ಬೆಳಕುಗಳ ಚೆಲ್ಲಾಟವನ್ನು ತಮ್ಮ ಶಿಲ್ಪದಲ್ಲಿ ಇವರು ಸ್ವಾರಸ್ಯವಾಗಿ ಬಳಸಿಕೊಂಡಿದ್ದಾರೆ.

ಶಕುಂತಲೆ ತನ್ನ ಸಾಕುತಂದೆಯಾದ ಕಣ್ವಋಷಿಗೆ ತಲೆಬಾಗಿಸಿ ಕೈಜೋಡಿಸಿ ನಮಸ್ಕಾರ ಮಾಡುತ್ತಿದ್ದಾಳೆ; ಕಣ್ವಋಷಿ ಬಲಗೈಯೆತ್ತಿ ಆಶೀರ್ವಾದ ಮಾಡುತ್ತಿದ್ದಾರೆ. ಶಕುಂತಲೆಯ ಮುಖದಲ್ಲಿ ನೀರವತೆ ; ಕಣ್ವಋಷಿ ತಾನು ಸಾಕಿ ಸಲಹಿದ ಮಗಳನ್ನು ಕಳುಹಿಸಿಕೊಡುವಾಗ ಆದ ದುಃಖವನ್ನು ಅದುಮಿಕೊಂಡು 'ತನ್ನ ಗಂಡನ ಮನೆಯನ್ನು ಸೇರಲಿ ; ಎಂದಿದ್ದರೂ ಅಲ್ಲಿಯೇ ಇರಬೇಕಾದವಳು ತಾನೆ ?' ಎಂದು ಸಮಾಧಾನ ತಂದುಕೊಳ್ಳುತ್ತಿರುವ ಮುಖಭಾವ. ಋಷಿಯ ಹಿಂಭಾಗದಲ್ಲಿ ಹುಲ್ಲು ಜೋಪಡಿ ; ಸೂರಿನಿಂದ ಇಳಿಬಿದ್ದ ಬಳ್ಳಿಗಳು ; ಆದಕ್ಕೂ ಹಿಂದೆ ಮರಗಳು. ಎಲ್ಲಕ್ಕಿಂತಲೂ ಸ್ವಾರಸ್ಯವಾದುದು ಮುಂಭಾಗದಲ್ಲಿರುವ ಜಿಂಕೆ ಮರಿ. ಅದನ್ನು ಎಳೆತನದಿಂದಲೂ ಶಕುಂತಲೆಯೇ ಮುದ್ದಿನಿಂದ ಸಾಕಿ ಬೆಳೆಸಿದವಳು; ಅವಳಿಗೂ ಅದಕ್ಕೂ ಪೂರ್ವ ಜನ್ಮದ ಸ್ನೇಹ! ಶಕುಂತಲೆ ಈಗ ತನ್ನನ್ನು ಬಿಟ್ಟು ಹೋಗುವಳೆಂದು ಅದಕ್ಕೂ ತಿಳಿದು, ಅವಳ ಸೀರೆಯ ಸೆರಗನ್ನು



ಹಿಡಿದು ಜಗ್ಗುತ್ತಿದೆ! ಬಿಡಲಾರೆನೆಂದು ಬೇಡಿಕೊಳ್ಳುತ್ತಿದೆ. ಮೂಕಪ್ರಾಣಿಗಳಿಗೂ ಅನುರಾಗವೆನ್ನುವುದಿರುತ್ತದೆ. ಸಿದ್ಧಾರ್ಥನ ಕುದುರೆಯಿದ್ದಂತೆ ಶಕುಂತಲೆಯ ಹುಲ್ಲೆಮರಿ. ವೆಂಕಟಪ್ಪನವರು ಯಾವ ವಿವರಣೆಯನ್ನೂ ಕೊಡದೆ ನನ್ನ ಪಾಡಿಗೆ ನನ್ನನ್ನು ಬಿಟ್ಟರು. ದಿಟವಾಗಿ, ಒಂದು ದಿಕ್ಕಿನಿಂದ ಬಂದ ಬೆಳಕಿನಲ್ಲಿ ಶಕುಂತಲೆಯ ಮುಖಭಾವ ಸ್ಪಷ್ಟವಾಗುತ್ತದೆ; ಇನ್ನೊಂದು ದಿಕ್ಕಿನಿಂದ ಬೆಳಕು ಬಿದ್ದರೆ ಕಣ್ವಮುನಿಯ ಭಾವಗಳು ಬೆಳಗುತ್ತವೆ.

ಅವರ ಕಡೆಗಾಲದ ವರ್ಷಗಳಲ್ಲಿ ಈ ಫಲಕಗಳನ್ನು ಮೈಸೂರು ಸರಕಾರ ಕೊಳ್ಳುವ ಆಲೋಚನೆಯಿದ್ದಿತು. ವೆಂಕಟಪ್ಪನವರಿಗೆ ಹಣದ ಚಿಂತೆಯಿರಲಿಲ್ಲ; 'ಎಷ್ಟಾದರೂ ಕೊಡಲಿ, ಆದರೆ ಈ ಕೃತಿಗಳನ್ನು ಸರಿಯಾಗಿ ಇಟ್ಟುಕೊಳ್ಳುವರೆಂಬ ಭರವಸೆ ನನಗೆ ಮೂಡಬೇಕು, ಇಲ್ಲವಾದರೆ ನಾನು ಕೊಡುವುದಿಲ್ಲ!' ಎನ್ನುತ್ತಿದ್ದರು. ಯಾವ ಫಲಕವನ್ನು ಎಲ್ಲಿ ಇರಿಸಿಬೇಕು, ಬೆಳಕು ಅದರ ಮೇಲೆ ಯಾವ ಕಡೆಯಿಂದ ಬೀಳಬೇಕು, ನೋಡುವವರು ಎಲ್ಲಿ ನಿಂತು ನೋಡಬೇಕು ಇವೆಲ್ಲವೂ ನಿಶ್ಚಯವಾದ ಮೇಲೇ ಫಲಕಗಳನ್ನು ಕೊಟ್ಟೇನು ಎಂದು ಒಮ್ಮೆ ಅವರು ನನಗೆ ಹೇಳಿದುದುಂಟು. ಕೊಳ್ಳುವಾಗ ಇರುವ ಉತ್ಸಾಹ ಕೊಂಡಾದಮೇಲೆ ಇರುವುದಿಲ್ಲ; ಕಲಾವಸ್ತುವನ್ನುಪ್ರದರ್ಶನಕ್ಕೆಂದು ಇರಿಸಿದಾಗ ವಿವೇಕ

ಇರಬೇಕು, ತಿಳುವಳಿಕೆ ಇರಬೇಕು ಎನ್ನುವುದು ಅವರ ತರ್ಕ. ಅವರು ತೀರಿಕೊಂಡ ಮೇಲೆ ಈಗ ಆ ಫಲಕಗಳನ್ನೆಲ್ಲ ಬೆಂಗಳೂರಿನ ಮ್ಯೂಸಿಯಂನಲ್ಲಿರಿಸಿದ್ದಾರೆ. ಅಲ್ಲಿ 'ವೆಂಕಟಪ್ಪ ಆರ್ಟ್ ಗ್ಯಾಲರಿ'ಯೊಂದನ್ನು ವ್ಯವಸ್ಥೆ ಮಾಡುವ ಯೋಜನೆಯಿದೆ.

ಹಿರಿಯ ಚೇತನ

ಕನ್ನಡನಾಡಿನ ಕಲೆಗಾರಿಕೆಯ ಹಿರಿಮೆ ತುಂಬ ಮೈತಳೆದು ಬಂದದ್ದು ಕೆ. ವೆಂಕಟಪ್ಪನವರಲ್ಲಿ. ಅವರು ಹಿಂದಿನ ತಲೆಮಾರಿನವರು ; ಹಿಂದಿನ ಹಿರಿಯ ಸಂಪ್ರದಾಯವನ್ನು ಎತ್ತಿ ಹಿಡಿದವರು. ಇಂದು ಕಾಣಸಿಗದ ಕಲಾನಿಷ್ಠೆ ಮೈವೆತ್ತಿ ಬಂದಂತೆ ಇದ್ದವರು ಅವರು. ಅವರು ಬದುಕಿ ಬಾಳಿದುದೇ ಒಂದು ಅದ್ಭುತ ದರ್ಶನದ ಬೆಳಕಿನಲ್ಲಿ. ನಿಲುವಿನ ಒಂದೊಂದು ಅಂಗುಲದಲ್ಲಿಯೂ ಎದ್ದು ಕಾಣುತ್ತಿದ್ದ ಅವರ ಸಹಜಗಾಂಭೀರ್ಯ ಕಲೆಗಾರಿಕೆಗೇ ವಿಶೇಷವಾದ ಒಂದು ಮರ್ಯಾದೆಯನ್ನು ತಂದುಕೊಟ್ಟದ್ದಿತು. ಇಡೀ ಬಾಳುವೆಯನ್ನು ಆದರ್ಶ ಕಲೆಗಾಗಿ ಮುಡಿಪಿಟ್ಟು, ಬಾಳಿನ ಎಲ್ಲ ವ್ಯವಹಾರಗಳನ್ನೂ ಕಲೆಯ ಕಡೆ ತಿರುಗಿಸಿ, ಅದನ್ನೇ ಎಡೆಬಿಡದೆ ಆರಾಧಿಸಿ ಕೃತಾರ್ಥರಾದರು ಅವರು.

ಕಲೆಗಾಗಿಯೇ ನೈಷ್ಠಿಕ ಬ್ರಹ್ಮಚಾರಿಯಾಗಿ ಉಳಿದರು, ಅಪರಿಗ್ರಹವ್ರತವನ್ನು ಹಿಡಿದರು ; ಕಲೆ ಅವರ

ಪಾಲಿಗೆ ಒಂದು ಯೋಗ, ಒಂದು ತಪಸ್ಸು. ಅವರು ಕಲೆಯ ಬಲೆಗೆ ಬೀಳದೆ ಇದ್ದಿದ್ದರೆ ಯೋಗದ ದಾರಿಯನ್ನು ಹಿಡಿದು ಸಿದ್ಧಪುರುಷರಾಗುತ್ತಿದ್ದರು. ಆ ತನ್ಮಯತೆ, ಏಕಾಂತನಿಷ್ಠೆ, ಕಠೋರಸಾಧನೆಗಳೊಡನೆ ದಿವ್ಯದರ್ಶನದ ಅನುಭವವೂ ಅವರಿಗೊದಗಿದ್ದಿತು. ಹಾಗೆಂದೇ ಎಷ್ಟು ಎಡರುತೊಡರುಗಳು ಬಂದರೂ ವಿರಸ ವೈಫಲ್ಯಗಳು ಬಂದರೂ ಸಮಾಧಾನವಾಗಿಯೇ ಇರುತ್ತಿದ್ದರು. ಸಮೃದ್ಧವಾದ ಶಾಂತಿ ಅವರ ಪಾಲಿಗಿದ್ದಿತು.

ತುಂಬು ಜೀವನದ ತಾರುಣ್ಯದಲ್ಲಿ ಮಹಾರಾಜರಿಂದ, ಗುರುಗಳಿಂದ ಸನ್ಮಾನಿತರಾದರು ; ಮಧ್ಯವಯಸ್ಸಿನ ವೇಳೆಗೆ ನಾಡಿನ ಹಿರಿಯ ಕಲಾವಿದರ ಅಗ್ರಪಂಕ್ತಿಗೆ ಸೇರಿದರು ; ವೃದ್ಧಾಪ್ಯದಲ್ಲಿ ಸ್ವತಂತ್ರ ಭಾರತದ ಕೇಂದ್ರ ಲಲಿತಕಲಾ ಆಕ್ಯಾಡಮಿಯ ಪ್ರಶಸ್ತಿಯನ್ನು ಪಡೆದರು. ಆದರೆ ಇವೆಲ್ಲ ಅವರ ವಿನಯವನ್ನಾಗಲೀ ಸ್ವಾತಂತ್ರ್ಯವನ್ನಾಗಲೀ ಸ್ವಭಾವವನ್ನಾಗಲೀ ಮಾರ್ಪಡಿಸಲಿಲ್ಲ. ತೀರ ನಿಃಶಕ್ತರಾಗಿ ಹಾಸಿಗೆ ಹಿಡಿಯುವವರೆಗೂ ಕಲೆಗಾಗಿ ದುಡಿದರು. ತಮ್ಮ ಆತ್ಮಸಾಕ್ಷಾತ್ಕಾರಕ್ಕೆ ಆತ್ಮಸಂತೋಷಕ್ಕೆ ಕಲೆ ಅಗತ್ಯವೆಂದು ಅವರು ಎಣಿಸಿದ್ದರು. ಮೊಳಕಾಲು ಕೀಲಿನಲ್ಲಿ ಆರ್ಥ್ರೈಟಿಸ್ ಬೇನೆ ಬಲಿತು ಪದ್ಮಾಸನದಲ್ಲಿ ಕೂಡುವುದು ಕಷ್ಟವಾದಾಗ, ಮೇಜಿನ ಮೇಲೆ ವೀಣೆಯನ್ನು ಇರಿಸಿಕೊಂಡು ನಿಂತೇ ನುಡಿಸುತ್ತಿದ್ದರು !

ಚಿತ್ರ, ಶಿಲ್ಪ, ವೀಣೆ ಮೂರು ಅವರ ಅನುರಾಗ

ವನ್ನು ಸೆಳೆದುವು ; ಅವರ ಪ್ರತಿಭೆಯನ್ನು ಮಿಾಟದುವು; ಅವರ ವ್ಯಕ್ತಿತ್ವವನ್ನುರೂಪಿಸಿದುವು. ಪ್ರತಿಭೆ, ಅಭ್ಯಾಸ, ಸಂಪ್ರದಾಯ, ರಸಸೃಷ್ಟಿ, ನಿಷ್ಠೆ, ಸ್ವಾತಂತ್ರ್ಯ ಇವೆಲ್ಲವೂ ಒಂದೆಡೆ ಕಲೆತು ವೆಂಕಟಪ್ಪನಾಗಿ ಕಾಣಿಸಿಕೊಂಡುವು. ಅವರು ಬದುಕಿದ್ದಾಗ ಕಲೆಯೇ ಜೀವಂತವಾಗಿ ಮೂರ್ತಿವತ್ತಾಗಿ ಇದ್ದಿತು ಎಂದರೆ ಅತಿಶಯೋಕ್ತಿಯಲ್ಲ.

ಈ ಮಹಾಪುರುಷನನ್ನು ಕನ್ನಡನಾಡು ಬಹು ಕಾಲದ ಪುಣ್ಯದಿಂದಲೇ ಪಡೆಯಿತು.

ಪ್ರಶ್ನೆಗಳು

1 ವೆಂಕಟಪ್ಪನವರು ಕಲಾಪರಿಣತಿಯನ್ನು ಹೇಗೆ ಸಾಧಿಸಿದರು ?

2 ಕಲೆಗಾರನಾಗಬೇಕಾದ ಅವರಿಂದ ಕಲಿತುಕೊಳ್ಳಬೇಕಾದ ಗುಣಗಳು ಯಾವವು ?

3 ಅವರ ನಿಸ್ಪೃಹ ಮನೋವೃತ್ತಿಯನ್ನು ತೋರಿಸುವ ಸನ್ನಿವೇಶಗಳು ಯಾವವು ?

4 ಅವರ ಉಪಕಾರ ಸ್ಮರಣೆಯ ಬಗೆಯನ್ನು ವಿವರಿಸಿ.

5 ವೆಂಕಟಪ್ಪನವರ ಅತ್ಯುತ್ತಮ ಕೃತಿಗಳು ಯಾವವು ?

6 ಅವನ್ನು ನಾವು ಉತ್ತಮ ಎಂದು ಹೇಳುವುದು ಯಾಕೆ ?